सत्यमेव जयते

# ಲೆಕ್ಕ ಪತ್ರ – ಒಂದು ವಿಹಂಗಮ ನೋಟ
# 2015–16

ಕರ್ನಾಟಕ ಸರ್ಕಾರ

# ಪ್ರಸ್ತಾವನೆ

ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ (ಕರ್ತವ್ಯ, ಅಧಿಕಾರ ಮತ್ತು ಸೇವಾನಿಯಮಗಳು) ಅಧಿನಿಯಮ 1971ರ ಅಧಿಕಾರದನ್ವಯ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ನಿರ್ದೇಶನಗಳ ಮೇರೆಗೆ ಕರ್ನಾಟಕ ರಾಜ್ಯ ಸರ್ಕಾರದ ವಾರ್ಷಿಕ ಲೆಕ್ಕ ಪತ್ರಗಳನ್ನು ರಾಜ್ಯದ ವಿಧಾನಮಂಡಲದಲ್ಲಿ ಸಾದರ ಪಡಿಸುವ ಸಲುವಾಗಿ ತಯಾರಿಸಿ, ಪರಿಶೋಧಿಸಲಾಗುವುದು. ರಾಜ್ಯ ಸರ್ಕಾರದ ವಾರ್ಷಿಕ ಲೆಕ್ಕಗಳು (ಅ) ಹಣಕಾಸು ಲೆಕ್ಕಗಳು ಮತ್ತು (ಆ) ಧನವಿನಿಯೋಗ ಲೆಕ್ಕಗಳನ್ನು ಒಳಗೊಂಡಿರುತ್ತವೆ.

ಹಣಕಾಸು ಲೆಕ್ಕಗಳು ಸಂಚಿತ ನಿಧಿ, ಸಾದಿಲ್ವಾರು ನಿಧಿ ಮತ್ತು ಸಾರ್ವಜನಿಕ ಲೆಕ್ಕಗಳ ಸಾರಾಂಶದ ವಿವರಣಾಪಟ್ಟಿಗಳನ್ನು ಒಳಗೊಂಡಿರುತ್ತವೆ. ಧನವಿನಿಯೋಗ ಲೆಕ್ಕಗಳು ರಾಜ್ಯ ವಿಧಾನಮಂಡಲವು ಅನುಮೋದಿಸಿದ ಅವಕಾಶಗಳಿಗೆ ಪ್ರತಿಯಾಗಿ ಅನುದಾನವಾರು ವೆಚ್ಚಗಳ ಮೊತ್ತವನ್ನು ದಾಖಲಿಸುತ್ತವೆ ಹಾಗೂ ಒದಗಿಸಿದ ಮೊತ್ತಗಳಿಗೂ ಮತ್ತು ವಾಸ್ತವ ವೆಚ್ಚಗಳಿಗೂ ನಡುವಿನ ವ್ಯತ್ಯಾಸಗಳಿಗೆ ವಿವರಣೆಯನ್ನು ನೀಡುತ್ತದೆ.

ಮಹಾಲೇಖಪಾಲರು (ಲೆಕ್ಕ ಮತ್ತು ಹಕ್ಕುದಾರಿ) ರಾಜ್ಯದ ಹಣಕಾಸು ಲೆಕ್ಕ ಮತ್ತು ಧನವಿನಿಯೋಗ ಲೆಕ್ಕಗಳನ್ನು ಸಿದ್ಧಪಡಿಸುತ್ತಾರೆ.

ರಾಜ್ಯದ ಹಣಕಾಸು ಲೆಕ್ಕಗಳು, ಧನವಿನಿಯೋಗ ಲೆಕ್ಕಗಳು, ರಾಜ್ಯದ ಹಣಕಾಸಿನ ವ್ಯವಹಾರಗಳ ಮೇಲಿನ ವರದಿ ಮತ್ತು "ಲೆಕ್ಕ ಪತ್ರ–ಒಂದು ವಿಹಂಗಮ ನೋಟ" – ಇವುಗಳ ಒಟ್ಟು ಓದುವಿಕೆಯು, ಕರ್ನಾಟಕ ಸರ್ಕಾರದ ಹಣಕಾಸು ವಹಿವಾಟಿನ ವಿವಿಧ ಮುಖಗಳ ಪರಿಣಾಮಕಾರಿ ಗ್ರಹಿಕೆಗೆ ಸಹಾಯ ಮಾಡುತ್ತದೆ. "ಲೆಕ್ಕಪತ್ರ – ಒಂದು ವಿಹಂಗಮ ನೋಟ"ವು ಹಣಕಾಸು ಲೆಕ್ಕಗಳು ಮತ್ತು ಧನವಿನಿಯೋಗ ಲೆಕ್ಕಗಳಲ್ಲಿ ಬಿಂಬಿತವಾಗಿರುವಂತೆ ರಾಜ್ಯ ಸರ್ಕಾರದ ಚಟುವಟಿಕೆಗಳ ಒಂದು ಸ್ಥೂಲನೋಟವನ್ನು ನೀಡುತ್ತದೆ. ಈ ಮಾಹಿತಿಯನ್ನು ಸಂಕ್ಷಿಪ್ತ ವಿವರಣೆಗಳು, ಕೋಷ್ಟಕಗಳು ಮತ್ತು ನಕ್ಷೆಗಳ ಮೂಲಕ ವಿಶದಪಡಿಸಲಾಗಿದೆ.

ಈ ಪ್ರಕಟಣೆಯನ್ನು ಉತ್ತಮಗೊಳಿಸುವ ದಿಶೆಯಲ್ಲಿ ತಮ್ಮ ಅಮೂಲ್ಯವಾದ ಸಲಹೆ ಸೂಚನೆಗಳಿಗೆ ಸದಾ ಸ್ವಾಗತವಿದೆ.

R Naresh

**(ಆರ್.ನರೇಶ್)**

ಸ್ಥಳ: ಬೆಂಗಳೂರು

ದಿನಾಂಕ: 23ನೇ ಡಿಸೆಂಬರ್ 2016

ಮಹಾಲೇಖಪಾಲರು (ಲೆಕ್ಕ ಮತ್ತು ಹಕ್ಕುದಾರಿ)

ಕರ್ನಾಟಕ

# ಪರಿವಿಡಿ


| | | ಪುಟ ಸಂಖ್ಯೆ |
|---|---|---|
| **ಅಧ್ಯಾಯ–I** | **ಪಕ್ಷಿ ನೋಟ** | |
| **1.1** | **ಪೀಠಿಕೆ** | 1 |
| **1.2** | **ಲೆಕ್ಕಗಳ ವಿನ್ಯಾಸ** | 1 |
| 1.2.1 | ಸರ್ಕಾರದ ಲೆಕ್ಕಗಳ ಭಾಗಗಳು | 1 |
| 1.2.2 | ಲೆಕ್ಕಗಳ ಸಂಕಲನ | 2 |
| **1.3** | **ಹಣಕಾಸು ಲೆಕ್ಕಗಳು ಮತ್ತು ಧನವಿನಿಯೋಗ ಲೆಕ್ಕಗಳು** | 2 |
| 1.3.1 | ಹಣಕಾಸು ಲೆಕ್ಕಗಳು | 2 |
| 1.3.2 | ಧನವಿನಿಯೋಗ ಲೆಕ್ಕಗಳು | 3 |
| **1.4** | **ನಿಧಿಗಳ ಆಕರಗಳು ಮತ್ತು ಅನ್ವಯಗಳು** | 4 |
| 1.4.1 | ಅರ್ಥೋಪಾಯ ಮುಂಗಡಗಳು | 4 |
| 1.4.2 | ನಿಧಿಗಳ ಹರಿವಿನ ವಿವರಣೆ | 4 |
| 1.4.3 | ರಾಜಸ್ವದ ಆಕರಗಳು | 6 |
| 1.4.4 | ವೆಚ್ಚದ ಉದ್ದೇಶ | 6 |
| **1.5** | **ಲೆಕ್ಕಗಳ ಮುಖ್ಯಾಂಶಗಳು** | 7 |
| **1.6** | **ಕೊರತೆ ಮತ್ತು ಹೆಚ್ಚಳಗಳ ವ್ಯಾಖ್ಯೆ** | 7 |
| 1.6.1 | ರಾಜಸ್ವ ಹೆಚ್ಚಳದ ಪ್ರವೃತ್ತಿ | 9 |
| 1.6.2 | ವಿತ್ತೀಯ ಕೊರತೆಯ ಪ್ರವೃತ್ತಿ | 9 |
| 1.6.3 | ಸರ್ಕಾರದ ಲೆಕ್ಕಗಳು | 10 |
| 1.6.4 | ಸಾಲದ ಮೊತ್ತಗಳಲ್ಲಿ ಬಂಡವಾಳ ವೆಚ್ಚಕ್ಕೆ ಬಳಸಿದ ಪ್ರಮಾಣ | 10 |
| **ಅಧ್ಯಾಯ–II** | **ಸ್ವೀಕೃತಿಗಳು** | |
| **2.1** | **ಪೀಠಿಕೆ** | 11 |
| **2.2** | **ರಾಜಸ್ವ ಸ್ವೀಕೃತಿಗಳು** | 11 |
| 2.2.1 | ರಾಜಸ್ವ ಸ್ವೀಕೃತಿಗಳ ಅಂಶಗಳು | 12 |
| 2.2.2 | ಆದಾಯದ ಪ್ರಮುಖ ಮೂಲಗಳು | 12 |
| **2.3** | **ರಾಜಸ್ವ ಸ್ವೀಕೃತಿಗಳ ಪ್ರವೃತ್ತಿ** | 13 |
| 2.3.1 | ತೆರಿಗೆ ರಾಜಸ್ವದ ಅಂಶಗಳು | 14 |
| **2.4** | **ರಾಜ್ಯದ ತೆರಿಗೆಯ ಸಂಗ್ರಹದ ನಿರ್ವಹಣೆ** | 15 |
| **2.5** | **ತೆರಿಗೆ ಸಂಗ್ರಹದ ದಕ್ಷತೆ** | 15 |
| **2.6** | **ಕೇಂದ್ರ ತೆರಿಗೆ ಮತ್ತು ಸುಂಕಗಳಲ್ಲಿ ರಾಜ್ಯದ ಪಾಲಿನ ಪ್ರವೃತ್ತಿ** | 16 |
| **2.7** | **ಸಹಾಯಾನುದಾನ ಮತ್ತು ವಂತಿಗೆಗಳು** | 16 |
| **2.8** | **ಸಾರ್ವಜನಿಕ ಋಣ** | 17 |
| **ಅಧ್ಯಾಯ–III** | **ವೆಚ್ಚಗಳು** | |
| **3.1** | **ಪೀಠಿಕೆ** | 18 |
| **3.2** | **ರಾಜಸ್ವ ವೆಚ್ಚ** | 18 |
| 3.2.1 | ರಾಜಸ್ವ ವೆಚ್ಚದ ವಿಭಾಗವಾರು ಹಂಚಿಕೆ | 19 |
| 3.2.2 | ವಿಭಗವಾರು ರಾಜಸ್ವ ವೆಚ್ಚದ ಸಂಯೋಜನೆಯ ಪ್ರವೃತ್ತಿ | 19 |
| 3.2.3 | ವೆಚ್ಚದ ಪ್ರಮುಖ ಉಪವಿಭಾಗಗಳ ವೆಚ್ಚಗಳು | 20 |
| **3.3** | **ಬಂಡವಾಳ ವೆಚ್ಚ** | 20 |
| 3.3.1 | ಬಂಡವಾಳ ವೆಚ್ಚದ ವಿಭಾಗವಾರು ವಿತರಣೆ | 21 |
| 3.3.2 | ಬಂಡವಾಳ ವೆಚ್ಚದ ಪ್ರವೃತ್ತಿ | 21 |

## ಪರಿವಿಡಿ


| | | ಪುಟ ಸಂಖ್ಯೆ |
|---|---|---|
| **ಅಧ್ಯಾಯ–IV** | **ಯೋಜನೆ ಮತ್ತು ಯೋಜನೇತರ ವೆಚ್ಚ** | |
| **4.1** | **ವೆಚ್ಚದ ಹಂಚಿಕೆ** | 22 |
| **4.2** | **ಯೋಜನಾ ವೆಚ್ಚ** | 22 |
| 4.2.1 | ಬಂಡವಾಳ ಲೆಕ್ಕದಡಿ ಯೋಜನಾ ವೆಚ್ಚ | 23 |
| **4.3** | **ಯೋಜನೇತರ ವೆಚ್ಚ** | 24 |
| **4.4** | **ಬದ್ಧ ವೆಚ್ಚಗಳು** | 25 |
| **ಅಧ್ಯಾಯ–V** | **ಧನವಿನಿಯೋಗ ಲೆಕ್ಕಗಳು** | |
| **5.1** | **ಧನವಿನಿಯೋಗ ಲೆಕ್ಕಗಳ ಸಾರಾಂಶ** | 26 |
| 5.1.1 | ಉಳಿತಾಯ / ಹೆಚ್ಚಳಗಳ ಅನುದಾನವಾರು ವಿವರಗಳು | 26 |
| **5.2** | **ಉಳಿತಾಯ ಪ್ರವೃತ್ತಿ** | 27 |
| **5.3** | **ಮಹತ್ವದ ಉಳಿತಾಯಗಳು** | 28 |
| **5.4** | **ಪೂರಕ ಅಂದಾಜುಗಳು** | 28 |
| **ಅಧ್ಯಾಯ–VI** | **ಆಸ್ತಿ ಮತ್ತು ಜವಾಬ್ದಾರಿಗಳು** | |
| **6.1** | **ಆಸ್ತಿಗಳು** | 31 |
| **6.2** | **ಋಣ ಮತ್ತು ಜವಾಬ್ದಾರಿಗಳು** | 31 |
| 6.2.1 | ರಾಜ್ಯ ಭವಿಷ್ಯ ನಿಧಿ | 33 |
| 6.2.2 | ಸರ್ಕಾರಿ ಜವಾಬ್ದಾರಿಗಳ ಪ್ರವೃತ್ತಿ | 33 |
| 6.2.3 | ಸಾದಿಲ್ವಾರು ನಿಧಿ | 34 |
| **6.3** | **ಖಾತರಿಗಳು** | 35 |
| **6.4** | **ಬಾಹ್ಯ ಬೆಂಬಲಿತ ಯೋಜನೆಗಳು** | 35 |
| **ಅಧ್ಯಾಯ–VII** | **ಇತರೆ ವಿಷಯಗಳು** | |
| **7.1** | **ಸಾರ್ವಜನಿಕ ಋಣದಡಿ ವ್ಯತಿರಿಕ್ತ ಶಿಲ್ಕುಗಳು** | 36 |
| **7.2** | **ರಾಜ್ಯ ಸರ್ಕಾರ ನೀಡಿದ ಸಾಲ ಮತ್ತು ಮುಂಗಡಗಳು** | 36 |
| **7.3** | **ಸ್ಥಳೀಯ ಸಂಸ್ಥೆಗಳು ಮತ್ತು ಇತರರಿಗೆ ನೀಡಿದ ಆರ್ಥಿಕ ಬೆಂಬಲ** | 36 |
| 7.3.1 | ಬಳಕೆ ಪ್ರಮಾಣ ಪತ್ರಗಳ ಸಲ್ಲಿಕೆ | 37 |
| **7.4** | **ನಗದು ಶಿಲ್ಕು ಮತ್ತು ನಗದು ಶಿಲ್ಕಿನ ಹೂಡಿಕೆಗಳು** | 37 |
| **7.5** | **ಲೆಕ್ಕಗಳ ಹೊಂದಾಣಿಕೆ** | 38 |
| **7.6** | **ಖಜಾನೆಗಳಿಂದ ಲೆಕ್ಕಗಳ ಸಲ್ಲಿಕೆ** | 38 |
| **7.7** | **ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳು ಮತ್ತು ಪಾವತಿಗಲ್ಲದ ಸವಿವರ ಸಾದಿಲ್ವಾರು ಬಿಲ್ಲುಗಳು** | 38 |
| **7.8** | **ಅಪೂರ್ಣ ಕಾಮಗಾರಿಗಳ ಮೇಲಿನ ಬದ್ಧತೆಗಳು** | 38 |

# ಅಧ್ಯಾಯ–I

## ಪಕ್ಷಿ ನೋಟ

### 1.1 ಪೀಠಿಕೆ

ಮಹಾಲೇಖಪಾಲರು (ಲೆಕ್ಕ ಮತ್ತು ಹಕ್ಕುದಾರಿ) ಕರ್ನಾಟಕ ಇವರು ಕರ್ನಾಟಕ ರಾಜ್ಯ ಸರ್ಕಾರದ ಸ್ವೀಕೃತಿ ಮತ್ತು ವಿತರಣೆಗಳ ಲೆಕ್ಕವನ್ನು ಸಂಕಲಿಸುತ್ತಾರೆ. ಈ ಸಂಕಲನವು, ಜಿಲ್ಲಾ ಖಜಾನೆಗಳು ಸಲ್ಲಿಸಿದ ಆರಂಭಿಕ ಲೆಕ್ಕಗಳು, ಲೋಕೋಪಯೋಗಿ ಮತ್ತು ಅರಣ್ಯ ವಿಭಾಗಗಳು, ಇತರ ಲೆಕ್ಕ ಸಲ್ಲಿಸುವ ಕಛೇರಿಗಳು ಸಲ್ಲಿಸಿದ ಲೆಕ್ಕಗಳು ಮತ್ತು ಭಾರತೀಯ ರಿಜರ್ವ್ ಬ್ಯಾಂಕ್, ಕೇಂದ್ರೀಯ ಲೆಕ್ಕ ವಿಭಾಗ, ನಾಗಪುರ, ಇವರು ನೀಡಿದ ತೀರುವಳಿ ಮೆಮೋ ಮತ್ತು ಕಾಲ ಕಾಲಕ್ಕೆ ಕರ್ನಾಟಕ ಸರ್ಕಾರವು ಹೊರಡಿಸಿದ ನಗದು ಹೊರಹರಿವು ಇಲ್ಲದ ಆದೇಶಗಳನ್ನು ಆಧರಿಸಿದೆ. ಈ ಸಂಕನಲದ ನಂತರ ಮಹಾಲೇಖಪಾಲರು (ಲೆಕ್ಕ ಮತ್ತು ಹಕ್ಕುದಾರಿ), ವಾರ್ಷಿಕ ಹಣಕಾಸು ಲೆಕ್ಕಗಳು ಮತ್ತು ಧನವಿನಿಯೋಗ ಲೆಕ್ಕಗಳನ್ನು ಸಿದ್ಧಪಡಿಸುತ್ತಾರೆ. ಇವುಗಳನ್ನು ಪ್ರಧಾನ ಮಹಾಲೇಖಪಾಲರು (ಸಾಮಾನ್ಯ ಮತ್ತು ಸಾಮಾಜಿಕ ಸೇವೆಗಳ ಲೆಕ್ಕ ಪರಿಶೋಧನೆ), ಕರ್ನಾಟಕ, ಇವರ ಲೆಕ್ಕ ಪರಿಶೋಧನೆ ಮತ್ತು ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರ ದೃಢೀಕರಣದ ನಂತರ ರಾಜ್ಯ ವಿಧಾನ ಮಂಡಲದಲ್ಲಿ ಮಂಡಿಸಲಾಗುವುದು.


### 1.2 ಲೆಕ್ಕಗಳ ವಿನ್ಯಾಸ

*1.2.1 ಸರ್ಕಾರದ ಲೆಕ್ಕಗಳ ಭಾಗಗಳು.*

| | |
|---|---|
| **ಭಾಗ – 1**<br>**ಸಂಚಿತ ನಿಧಿ** | ರಾಜಸ್ವ ಮತ್ತು ಬಂಡವಾಳ ಲೆಕ್ಕದ ಸ್ವೀಕೃತಿಗಳು ಮತ್ತು ವೆಚ್ಚ, ಸಾರ್ವಜನಿಕ ಋಣ ಮತ್ತು ಸಾಲಗಳು ಮತ್ತು ಮುಂಗಡಗಳು, ಅಂತರರಾಜ್ಯ ಹೊಂದಾಣಿಕೆ ಮತ್ತು ಸಾದಿಲ್ವಾರು ನಿಧಿಗೆ ವಿನಿಯೋಗ ಲೆಕ್ಕಗಳನ್ನು ಒಳಗೊಂಡಿದೆ. |
| **ಭಾಗ – 2**<br>**ಸಾದಿಲ್ವಾರು ನಿಧಿ** | ಆಯವ್ಯಯದಲ್ಲಿ ಸೇರಿರದ ಅನಿರೀಕ್ಷಿತ ವೆಚ್ಚಗಳನ್ನು ಭರಿಸಲು ಸ್ಥಾಪಿಸಲಾಗಿದೆ. ಈ ನಿಧಿಯಿಂದ ಮಾಡಿದ ವೆಚ್ಚವನ್ನು ಅದೇ ಆರ್ಥಿಕ ವರ್ಷದಲ್ಲಿ ಆಂತರಿಕ ವರ್ಗಾವಣೆಯ ಮೂಲಕ ಅಥವಾ ಮುಂದಿನ ಆರ್ಥಿಕ ವರ್ಷದಲ್ಲಿ ಸಂಚಿತ ನಿಧಿಗೆ ಹೊಸ ಖಚಿನ ಮೂಲಕ ಪುನರ್ಭರ್ತಿ ಮಾಡಲಾಗುವುದು. |
| **ಭಾಗ – 3**<br>**ಸಾರ್ವಜನಿಕ ಲೆಕ್ಕ** | ಸಣ್ಣ ಉಳಿತಾಯ ಮತ್ತು ಭವಿಷ್ಯ ನಿಧಿಗಳು, ಮೀಸಲು ನಿಧಿಗಳು, ಠೇವಣಿಗಳು ಮತ್ತು ಮುಂಗಡಗಳು ಅಮಾನತ್ತು ಮತ್ತು ಇರಸಾಲು ವಹಿವಾಟುಗಳನ್ನು ಒಳಗೊಂಡಿದೆ. ಸಣ್ಣ ಉಳಿತಾಯ ಮತ್ತು ಭವಿಷ್ಯ ನಿಧಿ, ಮೀಸಲು ನಿಧಿ ಮತ್ತು ಠೇವಣಿಗಳು ಸರ್ಕಾರದ ಪುನರ್ಪಾವತಿಯ ಜವಾಬ್ದಾರಿಗಳಾದರೆ, ಮುಂಗಡಗಳು ಸರ್ಕಾರಕ್ಕೆ ಜಮೆಯಾಗಬೇಕಾದುದನ್ನು ಸೂಚಿಸುತ್ತವೆ. ಅಮಾನತ್ತು ಮತ್ತು ಇರಸಾಲು ವಹಿವಾಟುಗಳು ಹೊಂದಾಣಿಕೆಯ ನಮೂದುಗಳಾಗಿದ್ದು, ಅವುಗಳನ್ನು ಅಂತಿಮ ಲೆಕ್ಕ ಶೀರ್ಷಿಕೆಗೆ ಲೆಕ್ಕ ಮಾಡಿ ಚುಕ್ತಗೊಳಿಸಬೇಕಾಗುತ್ತದೆ. |

### *1.2.2 ಲೆಕ್ಕಗಳ ಸಂಕಲನ*

ಲೆಕ್ಕಗಳ ಸಂಕಲನದ ಹರಿವಿನ ನಕ್ಷೆ:




## 1.3 ಹಣಕಾಸು ಲೆಕ್ಕಗಳು ಮತ್ತು ಧನವಿನಿಯೋಗ ಲೆಕ್ಕಗಳು

### *1.3.1 ಹಣಕಾಸು ಲೆಕ್ಕಗಳು*

ಹಣಕಾಸು ಲೆಕ್ಕಗಳು ಸರ್ಕಾರದ ಆಯಾ ವರ್ಷದ ಸ್ವೀಕೃತಿಗಳು ಮತ್ತು ವಿತರಣೆಗಳನ್ನಲ್ಲದೆ, ವಿತರಣೆಗಳ ಜೊತೆಗೆ, ಲೆಕ್ಕಗಳಲ್ಲಿ ದಾಖಲಿಸಲಾದ ರಾಜಸ್ವ ಮತ್ತು ಬಂಡವಾಳ ಲೆಕ್ಕಗಳು, ಸಾರ್ವಜನಿಕ ಋಣ ಮತ್ತು ಸಾರ್ವಜನಿಕ ಲೆಕ್ಕಗಳ ಶಿಲ್ಕುಗಳು ತೋರಿಸುವ ಆರ್ಥಿಕ ಪರಿಣಾಮಗಳನ್ನು ಸಹ ಬಿಂಬಿಸುತ್ತವೆ. ಹಣಕಾಸು ಲೆಕ್ಕಗಳು ಹೆಚ್ಚು ವ್ಯಾಪಕ ಮತ್ತು

ಉಪಯುಕ್ತವಾಗುವಂತೆ ಎರಡು ಸಂಪುಟಗಳನ್ನು ಹೊಂದಿವೆ. **ಸಂಪುಟ– I** ರಲ್ಲಿ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರ ದೃಢೀಕರಣ ಪತ್ರ, ಹಣಕಾಸು ಲೆಕ್ಕಗಳ ಮಾರ್ಗದರ್ಶಿ, ಒಟ್ಟಾರೆ ಸ್ವೀಕೃತಿಗಳು ಮತ್ತು ವಿತರಣೆಗಳ ಸಂಕ್ಷಿಪ್ತ ವಿವರಣಾ ಪಟ್ಟಿಗಳು, ಸರ್ಕಾರದ ಆಸ್ತಿ ಮತ್ತು ಜವಾಬ್ದಾರಿಗಳು, ಸಂಚಿತ ಬಂಡವಾಳ ವೆಚ್ಚ, ಸಾಲಗಳು ಮತ್ತು ಇತರ ಜವಾಬ್ದಾರಿಗಳು, ಸಾಲಗಳು ಮತ್ತು ಮುಂಗಡಗಳು, ಸರ್ಕಾರ ನೀಡಿರುವ ಖಾತರಿಗಳು ಮತ್ತು ಸಹಾಯನುದಾನಗಳು, ಸರ್ಕಾರದ ಹೂಡಿಕೆಗಳು, ಪುರಸ್ಕೃತ ಮತ್ತು ಪ್ರಭೃತ ಖರ್ಚಿನ ವಿತರಣೆ, ರಾಜಸ್ವ ಲೆಕ್ಕದಿಂದ ಹೊರತಾದ ಖರ್ಚುಗಳ ನಿಧಿಯ ಆಕರ, ಮತ್ತು ವಿನಿಯೋಗ, ಸರ್ಕಾರದ ಲೆಕ್ಕಗಳ ಶಿಲ್ಕುಗಳ ಸಾರಾಂಶ ಮತ್ತು ಬಾಬತ್ತುಗಳ ಆರ್ಥಿಕ ಸ್ಥಿತಿಗತಿಗಳ ಸಂಕ್ಷಿಪ್ತ ವಿವರಣಾಪಟ್ಟಿಗಳನ್ನು ಒಳಗೊಂಡಿದ್ದರೆ, **ಸಂಪುಟ– II** ರಲ್ಲಿ ವಿವರಣಾ ಪಟ್ಟಿಗಳು **(ಭಾಗ–I)** ಮತ್ತು ಅನುಬಂಧಗಳನ್ನು **(ಭಾಗ–II)** ಒಳಗೊಂಡಿದೆ.

2015–16ರ ಹಣಕಾಸು ಲೆಕ್ಕಗಳಲ್ಲಿ ತೋರಿಸಿರುವಂತೆ ಕರ್ನಾಟಕ ಸರ್ಕಾರದ ಸ್ವೀಕೃತಿಗಳು ಮತ್ತು ವಿತರಣೆಗಳನ್ನು ಕೆಳಗೆ ನೀಡಲಾಗಿದೆ.

**(₹ ಕೋಟಿಗಳಲ್ಲಿ)**

| | | | |
|---|---|---|---|
| **ಸ್ವೀಕೃತಿಗಳು (ಒಟ್ಟು : ₹138,398)** | **ರಾಜಸ್ವ (ಒಟ್ಟು: ₹118,817)** | ರಾಜ್ಯದ ಸ್ವಂತ ತೆರಿಗೆ ರಾಜಸ್ವ | 75,550 |
| | | ಕೇಂದ್ರ ತೆರಿಗೆ ಮತ್ತು ಸುಂಕಗಳಲ್ಲಿ ರಾಜ್ಯದ ಪಾಲು | 23,983 |
| | | ತೆರಿಗೆಯೇತರ ರಾಜಸ್ವ | 5,355 |
| | | ಸಹಾಯಾನುದಾನ ಮತ್ತು ವಂತಿಗೆಗಳು[(1)] | 13,929 |
| | **ಬಂಡವಾಳ (ಒಟ್ಟು: ₹19,581)** | ಸಾಲ ಮತ್ತು ಮುಂಗಡಗಳ ವಸೂಲಾತಿ | 60 |
| | | ಇತರೆ ಸ್ವೀಕೃತಿಗಳು (ಇತರೆ ಬಂಡವಾಳ ಸ್ವೀಕೃತಿಗಳು) | 352 |
| | | ಸಾಲಗಳು ಮತ್ತು ಇತರ ಜವಾಬ್ದಾರಿಗಳು[(2)] | 19,169 |
| **ವಿತರಣೆಗಳು (ಒಟ್ಟು : ₹138,398)** | | **ರಾಜಸ್ವ**[(3)] | 117,029 |
| | | **ಬಂಡವಾಳ** | 20,713 |
| | | **ಸಾಲಗಳು ಮತ್ತು ಮುಂಗಡಗಳು** | 656 |
| (1) | 2015–16ರಿಂದ ಭಾರತ ಸರ್ಕಾರವು ವಿವಿಧ ಕೇಂದ್ರ ಯೋಜನೆಗಳು ಮತ್ತು ಕಾರ್ಯಕ್ರಮಗಳ ಅನುಷ್ಠಾನಕ್ಕೆ ರಾಜ್ಯ ಅನುಷ್ಠಾನಾಧಿಕಾರಿಗಳಿಗೆ / ಸರ್ಕಾರೇತರ ಸಂಘಗಳಿಗೆ ಸಹಾಯಾನುದಾನಗಳು ಮತ್ತು ವಂತಿಗೆಗಳನ್ನು ಬಿಡುಗಡೆ ಮಾಡುವ ವಿಧಾನವನ್ನು ಬದಲಾಯಿಸಿದೆ. 2015–16ರಲ್ಲಿ ಕೇಂದ್ರ ಸರ್ಕಾರವು ₹160 ಕೋಟಿಗಳನ್ನು 'ಸಂಸದರ ಕ್ಷೇತ್ರಾವಾರು ಅಭಿವೃದ್ಧಿ ಯೋಜನೆ' ಗಾಗಿ ಜಿಲ್ಲಾಧಿಕಾರಿಗಳಿಗೆ ನೇರವಾಗಿ ಬಿಡುಗಡೆ ಮಾಡಿದೆ. ಸದರಿ ವಿವರವನ್ನು ಹಣಕಾಸು ಲೆಕ್ಕ ಸಂಪುಟ II ರ ಅನುಬಂಧ VI ರಲ್ಲಿ ಕೊಡಲಾಗಿದೆ. | | |
| (2) | ಇದು (ಅ) ಸಾರ್ವಜನಿಕ ಋಣ {₹16,962 ಕೋಟಿ}; (ಆ) ಸಾದಿಲ್ವಾರು ನಿಧಿ {ಇಲ್ಲ}; (ಇ) ಸಾರ್ವಜನಿಕ ಲೆಕ್ಕ {₹2,127 ಕೋಟಿ} ಮೊತ್ತದಲ್ಲಿ ಕಳೆದ (ಈ) ನಗದು ಶಿಲ್ಕು {₹(-) 80 ಕೋಟಿ} ಒಳಗೊಂಡಿದೆ. | | |
| (3) | ಬಂಡವಾಳ ಆಸ್ತಿಗಳ ಸೃಜನೆಗೆ ನಗರ ಸ್ಥಳೀಯ ಸಂಸ್ಥೆಗಳಿಗೆ ಬಿಡುಗಡೆಗೊಳಿಸಿದ ₹3,141 ಕೋಟಿಗಳ ಅನುದಾನವು ಇದರಲ್ಲಿ ಸೇರಿದೆ. (ಹಣಕಾಸು ಲೆಕ್ಕಗಳ ಸಂಪುಟ I ರ ವಿವರಣಾ ಪಟ್ಟಿ–10ನ್ನು ನೋಡಿ). | | |

### *1.3.2. ಧನವಿನಿಯೋಗ ಲೆಕ್ಕಗಳು*

ಧನವಿನಿಯೋಗ ಲೆಕ್ಕಗಳು ಹಣಕಾಸು ಲೆಕ್ಕಗಳಿಗೆ ಪೂರಕವಾಗಿದ್ದು ರಾಜ್ಯ ವಿಧಾನ ಮಂಡಲವು ಅನುಮೋದಿಸಿದ ಅವಕಾಶಗಳಿಗೆ ಪ್ರತಿಯಾಗಿ ಅನುದಾನವಾರು ಒಟ್ಟು ವೆಚ್ಚವನ್ನು ದಾಖಲಿಸಿ ಅವಕಾಶ ಒದಗಿಸಿದ್ದ ಮೊತ್ತಗಳಿಗೂ ವಾಸ್ತವ ವೆಚ್ಚಗಳಿಗೂ ನಡುವಿನ ವ್ಯತ್ಯಾಸಕ್ಕೆ ವಿವರಣೆಗಳನ್ನು ನೀಡುತ್ತದೆ. ಒಟ್ಟು 28 ಪುರಸ್ಕೃತ ಅನುದಾನಗಳು ಮತ್ತು ಒಂದು ಪ್ರಭೃತ ವಿನಿಯೋಗವು ಇದೆ.

ರಾಜ್ಯ ಸಂಚಿತ ನಿಧಿಯ ಮೇಲಿನ ಪ್ರಭೃತ ಮತ್ತು ಇತರೆ ವೆಚ್ಚಗಳಿಗಾಗಿ ಕಲ್ಪಿಸಿರುವ ಅವಕಾಶಗಳಿಗಾಗಿ ವಿಧಾನ ಮಂಡಲವು 2015 ಮತ್ತು 2016ರ ಧನವಿನಿಯೋಗ ಅಧಿನಿಯಮವನ್ನು ಅನುಮೋದಿಸಿತು. 2015 ಮತ್ತು 2016ರ ಧನವಿನಿಯೋಗ

ಅಧಿನಿಯಮವು ಪ್ರಸಕ್ತ ವರ್ಷದಲ್ಲಿ ರಾಜ್ಯ ವಿಧಾನ ಮಂಡಲವು ಅನುಮೋದಿಸಿದ ₹166,672 ಕೋಟಿಗಳ ಪೂರಕ ಅನುದಾನವೂ ಸೇರಿದಂತೆ ₹18,708 ಕೋಟಿಗಳ ಒಟ್ಟು ವೆಚ್ಚವನ್ನು ಪ್ರಕ್ಷೇಪಿಸಿತ್ತು. ಇದರೊಂದಿಗೆ ವಸೂಲಿಯ ಮೊತ್ತವಾಗಿ ₹12,366 ಕೋಟಿಗಳನ್ನು ವೆಚ್ಚದಲ್ಲಿ ಕಡಿಮೆಯೆಂದು ಪರಿಗಣಿಸಬೇಕಾಗಿ ಪ್ರಕ್ಷೇಪಿಸಲಾಗಿತ್ತು.

2015–16ರ ಧನವಿನಿಯೋಗ ಲೆಕ್ಕಗಳು ಒಟ್ಟಾರೆ ಆಯವ್ಯಯ ಅಂದಾಜು ₹1,49,250 ಕೋಟಿಗಳಿಗೆ ಪ್ರತಿಯಾಗಿ ₹166,672 ಕೋಟಿಗಳ ವೆಚ್ಚವನ್ನು ತೋರಿಸಿದ್ದು, ₹17,356 ಕೋಟಿಗಳ ನಿವ್ವಳ ಉಳಿತಾಯವಾಗಿದೆ. ಇದರಲ್ಲಿ 4 ಅನುದಾನಗಳ ಹೆಚ್ಚುವರಿ ವೆಚ್ಚ ₹66 ಕೋಟಿಗಳೂ ಸೇರಿವೆ. ವೆಚ್ಚದಲ್ಲಿ ಕಡಿತವೆಂದು ತೋರಿಸುವ ವಸೂಲಾತಿಯ ಮೊತ್ತವು ₹6,742 ಕೋಟಿಗಳಷ್ಟಿದ್ದು, ಆಯವ್ಯಯ ಅಂದಾಜಿನ (₹12,366 ಕೋಟಿ) ಮೊತ್ತಕ್ಕಿಂತಲೂ ₹5,624 ಕೋಟಿಗಳಷ್ಟು ಕಡಿಮೆಯಾಗಿದೆ. ಒಟ್ಟು ವೆಚ್ಚದ ಮೊತ್ತವು ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಮೂಲಕ ಸೆಳೆದ ₹91 ಕೋಟಿಗಳನ್ನು ಒಳಗೊಂಡಿದ್ದು,

2015–16ರಲ್ಲಿ ₹6,368 ಕೋಟಿಗಳ ಮೊತ್ತವು ಸಾರ್ವಜನಿಕ ಲೆಕ್ಕದಡಿ ನಿರ್ದಿಷ್ಟ ಉದ್ದೇಶಗಳಿಗಾಗಿ ನಿಯುಕ್ತ ಆಡಳಿತಾಧಿಕಾರಿಗಳು ನಿರ್ವಹಿಸುವ ವೈಯಕ್ತಿಕ ಠೇವಣಿ ಲೆಕ್ಕಗಳಿಗೆ ಸಂಚಿತ ನಿಧಿಯಿಂದ ವರ್ಗಾಯಿಸಲ್ಪಟ್ಟಿದೆ. ಸಾಧಾರಣವಾಗಿ, ಆಡಳಿತಾಧಿಕಾರಿಗಳು ಆರ್ಥಿಕ ವರ್ಷದ ಕೊನೆಯಲ್ಲಿ ವೈಯಕ್ತಿಕ ಠೇವಣಿ ಲೆಕ್ಕದಲ್ಲಿ ಬಳಕೆಯಾಗದೆ ಉಳಿದ ಮೊತ್ತವನ್ನು ಸಂಚಿತ ನಿಧಿಗೆ ವರ್ಗಾಯಿಸಬೇಕಾಗಿದೆ. ವರ್ಷದ ಕೊನೆಯಲ್ಲಿ ಒಟ್ಟಾರೆ ₹2,736 ಕೋಟಿಗಳ ಮೊತ್ತವು ಆಡಳಿತಾಧಿಕಾರಿಗಳ ವೈಯಕ್ತಿಕ ಠೇವಣಿ ಲೆಕ್ಕದಲ್ಲಿ ಬಳಕೆಯಾಗದೆ ಉಳಿದಿತ್ತು.

## 1.4 ನಿಧಿಗಳ ಆಕರಗಳು ಮತ್ತು ಅನ್ವಯಗಳು

### *1.4.1 ಅರ್ಥೋಪಾಯ ಮುಂಗಡಗಳು*

ಇವು ಕೇವಲ ತಾತ್ಕಾಲಿಕ ಸ್ವರೂಪದ ಮುಂಗಡಗಳು. ಭಾರತೀಯ ರಿಜರ್ವ್‌ಬ್ಯಾಂಕಿನಲ್ಲಿ ರಾಜ್ಯ ಸರ್ಕಾರದ ನಗದು ಶಿಲ್ಕು ಕನಿಷ್ಠ ಮೊತ್ತಕ್ಕಿಂತ ಕಡಿಮೆಯಾದಾಗ ಆ ಕೊರತೆಯನ್ನು ತುಂಬಲು ಈ ಮುಂಗಡವನ್ನು ಪಡೆಯಲಾಗುತ್ತದೆ. ಗರಿಷ್ಠ ಅರ್ಥೋಪಾಯ ಮುಂಗಡವನ್ನು ಪಡೆದ ನಂತರವೂ ನಗದು ಶಿಲ್ಕು ಕನಿಷ್ಠ ಮೊತ್ತಕ್ಕಿಂತಲೂ ಕಡಿಮೆಯಿದ್ದಲ್ಲಿ, ಆ ಕೊರತೆಯನ್ನು ಓವರ್ ಡ್ರಾಫ್ಟ್ ಸೌಲಭ್ಯದ ಮೂಲಕ ಭರಿಸಲಾಗುತ್ತದೆ. 2015–16ರಲ್ಲಿ ರಾಜ್ಯ ಸರ್ಕಾರವು ಭಾರತೀಯ ರಿಜರ್ವ್ ಬ್ಯಾಂಕಿನಿಂದ ಯಾವುದೇ ಅರ್ಥೋಪಾಯ ಮುಂಗಡ ಅಥವಾ ಓವರ್ ಡ್ರಾಫ್ಟ್ ಸೌಲಭ್ಯವನ್ನು ಪಡೆದಿರುವುದಿಲ್ಲ.

### *1.4.2 ನಿಧಿಗಳ ಹರಿವಿನ ವಿವರಣೆ*

2015–16ನೇ ವರ್ಷದಲ್ಲಿ ರಾಜ್ಯವು ₹1,789 ಕೋಟಿಗಳ ರಾಜಸ್ವ ಹೆಚ್ಚಳ ಮತ್ತು ₹19,169 ಕೋಟಿಗಳ ವಿತ್ತೀಯ ಕೊರತೆಯನ್ನು ಹೊಂದಿದ್ದು ಇದು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ (ರಾ.ಒ.ಆಂ.ಉ)[1] ಶೇಕಡ 0.24 ಮತ್ತು ಶೇಕಡ 2.60 ರಷ್ಟಿತ್ತು. ವಿತ್ತೀಯ ಕೊರತೆಯು ಒಟ್ಟು ವೆಚ್ಚದ ಶೇಕಡ 13.85 ರಷ್ಟಿತ್ತು. ಈ ಕೊರತೆಯನ್ನು ಸಾರ್ವಜನಿಕ ಋಣ (₹16,962 ಕೋಟಿ), ಸಾರ್ವಜನಿಕ ಲೆಕ್ಕದಡಿಯ ನಿವ್ವಳ ಹೆಚ್ಚಳ (₹2,127 ಕೋಟಿ), ಸಾದಿಲ್ವಾರು ನಿಧಿಯ ಕೊಡುಗೆ (ಇಲ್ಲ) ಮತ್ತು ಆರಂಭಿಕ ಮತ್ತು ಅಂತಿಮ ಶಿಲ್ಕುಗಳ ನಿವ್ವಳ (₹(-)80 ಕೋಟಿ) ಜಮೆಗಳಿಂದ ಭರಿಸಲಾಗಿತ್ತು. ಸುಮಾರು ಶೇಕಡ 72.87ರಷ್ಟು ರಾಜಸ್ವ ಸ್ವೀಕೃತಿಗಳನ್ನು (₹118,817 ಕೋಟಿ), ಸಂಬಳ[2] (₹9,167 ಕೋಟಿ), ಸಬ್ಸಿಡಿಗಳು[2&3]

(₹13,149 ಕೋಟಿ), ಸಹಾಯಾನುದಾನ[2] (₹7,250 ಕೋಟಿ), ಬಡ್ಡಿಪಾವತಿ (₹11,343 ಕೋಟಿ), {ಇದರಲ್ಲಿ ಆಯವ್ಯಯ ಹೊರತಾದ ಸಾಲದ ಮೇಲಿನ ಬಡ್ಡಿ (₹597 ಕೋಟಿ) '2049–ಬಡ್ಡಿಪಾವತಿ' ಪ್ರಧಾನ ಲೆಕ್ಕ ಶೀರ್ಷಿಕೆಯಲ್ಲದೆ ವಿವಿಧ ಕಾರ್ಯಿಕ ಪ್ರಧಾನ ಲೆಕ್ಕ ಶೀರ್ಷಿಕೆಗಳಡಿಯಲ್ಲಿಯೂ ಲೆಕ್ಕ ಮಾಡಲಾಗಿದೆ} ನಿವೃತ್ತಿ ವೇತನ ಪಾವತಿ (₹11,251 ಕೋಟಿ), ಸ್ಥಳೀಯ ಸಂಸ್ಥೆಗಳು ಮತ್ತು ಪಂಚಾಯತ್ ರಾಜ್ ಸಂಸ್ಥೆಗಳಿಗೆ ಪರಿಹಾರ ಮತ್ತು ನಿಯೋಜನೆ (₹32,771 ಕೋಟಿ), ಸಾಮಾಜಿಕ ಭದ್ರತಾ ವಿಶ್ರಾಂತಿ ವೇತನ (₹2,247 ಕೋಟಿ) ಮುಂತಾದ ಬದ್ಧ ವೆಚ್ಚಗಳಿಗೆ (₹87,177 ಕೋಟಿ) ಲೆಕ್ಕ ಮಾಡಲಾಗಿದೆ.

## ನಿಧಿಗಳ ಆಕರಗಳು ಮತ್ತು ಅನ್ವಯಗಳು


(₹ಕೋಟಿಗಳಲ್ಲಿ)

| | ವಿವರಗಳು | ಮೊತ್ತ |
|---|---|---|
| ಆಕರಗಳು | 1.4.2015 ರಲ್ಲಿದ್ದಂತೆ ಆರಂಭಿಕ ಶಿಲ್ಕು | 5 |
| | ರಾಜಸ್ವ ಸ್ವೀಕೃತಿಗಳು | 118,817 |
| | ಇತರೆ ಬಂಡವಾಳ ಸ್ವೀಕೃತಿಗಳು ಮತ್ತು ಸಾಲ ಮತ್ತು ಮುಂಗಡಗಳ ವಸೂಲಾತಿ | 412 |
| | ಸಾರ್ವಜನಿಕ ಋಣ | 21,072 |
| | ಸಣ್ಣ ಉಳಿತಾಯಗಳು, ಭವಿಷ್ಯ ನಿಧಿಗಳು ಮತ್ತು ಇತರೆ | 5,486 |
| | ಮೀಸಲು ನಿಧಿಗಳು ಮತ್ತು ಋಣ ಪರಿಹಾರ ನಿಧಿಗಳು | 4,591 |
| | ಸ್ವೀಕೃತ ಠೇವಣಿಗಳು | 42,411 |
| | ಅಮಾನತ್ತು ಲೆಕ್ಕ | 342,661 |
| | ಇರಸಾಲುಗಳು | 29 |
| | **ಒಟ್ಟು** | **535,484** |
| ಅನ್ವಯ | ರಾಜಸ್ವ ವೆಚ್ಚ | 117,029 |
| | ಬಂಡವಾಳ ವೆಚ್ಚ | 20,713 |
| | ಸಾಲ ನೀಡಿಕೆ | 656 |
| | ಸಾರ್ವಜನಿಕ ಋಣ ಮರುಪಾವತಿ | 4,110 |
| | ಸಣ್ಣ ಉಳಿತಾಯಗಳು, ಭವಿಷ್ಯನಿಧಿಗಳು ಮತ್ತು ಇತರೆ ಪಾವತಿಗಳು | 3,401 |
| | ಮೀಸಲು ಮತ್ತು ಋಣ ಪರಿಹಾರ ನಿಧಿಗಳು | 6,852 |
| | ಠೇವಣಿಗಳ ಮರುಪಾವತಿ | 42,128 |
| | ಆಮಾನತ್ತು ಲೆಕ್ಕ | 340,625 |
| | ಇರಸಾಲುಗಳು | 45 |
| | ಅಂತಿಮ ಶಿಲ್ಕು 31.3.2016 ರಲ್ಲಿದ್ದಂತೆ | (–)75 |
| | **ಒಟ್ಟು** | **535,484** |

| | |
|---|---|
| (1) | 2015–16ನೇ ವರ್ಷದ ರಾ.ಒ.ಆಂ.ಉ. : ₹735,975 ಕೋಟಿ (ಆಕರ: ಮಧ್ಯಂತರ ವಿತ್ತೀಯ ಯೋಜನೆ 2016–20). |
| (2) | ಸಂಬಳ, ಸಬ್ಸಿಡಿಗಳು ಮತ್ತು ಸಹಾಯಾನುದಾನಗಳು ಎಲ್ಲಾ ವಿಭಾಗಗಳಿಂದ ಸಂಕಲಿತವಾಗಿದೆ ಮತ್ತು ಸಂಬಳ ವೆಚ್ಚವು ಸ್ಥಳೀಯ ಸಂಸ್ಥೆಗಳಿಗೆ ಸಂಬಳಕ್ಕಾಗಿ ನೀಡಿದ ಅನುದಾನಗಳನ್ನು ಒಳಗೊಂಡಿರುವುದಿಲ್ಲ. |
| (3) | ಸಬ್ಸಿಡಿ '106 ಸಬ್ಸಿಡಿಗಳು' ಅಡಿಯಲ್ಲಿ ಸಂಕಲಿಸಿದ ವೆಚ್ಚವನ್ನು ಒಳಗೊಂಡಿದೆ. |

### 1.4.3 ರಾಜಸ್ವದ ಆಕರಗಳು


ಸರ್ಕಾರವು ಮಾಡುವ ಸಾರ್ವಜನಿಕ ವೆಚ್ಚಗಳು ಮುಖ್ಯವಾಗಿ ಸಂಚಿತ ನಿಧಿಯಡಿಯ ಸರ್ಕಾರದ ಸ್ವೀಕೃತಿಗಳು, ಸಾರ್ವಜನಿಕ ಋಣದ ಸ್ವೀಕೃತಿಗಳು, ಸಾಲಗಳು ಮತ್ತು ಮುಂಗಡಗಳ ವಸೂಲಾತಿ ಮತ್ತು ಸಾರ್ವಜನಿಕ ಲೆಕ್ಕದಡಿಯ ನಗದು ಏರಿಕೆಯನ್ನು ಕಳೆದ ನಂತರ ನಿವ್ವಳ ಏರಿಕೆಗಳಿಂದ ಬಂದ ಜಮೆಗಳಿಂದ ಆಗುತ್ತದೆ. ಸಂಚಿತ ನಿಧಿಯಡಿ ಪ್ರತಿ ರೂಪಾಯಿಯ ವಿಭಾಗವಾರು ಸ್ವೀಕೃತಿಯನ್ನು ಕೆಳಗಿನ ಪೈ ನಕ್ಷೆಯಲ್ಲಿ ನೀಡಲಾಗಿದೆ.




**ಸೂಚನೆ:** ಸ್ವೀಕೃತಿಯಡಿಯಲ್ಲಿ ಇತರೆ ಬಂಡವಾಳ ಜಮೆ (₹352 ಕೋಟಿ) ಮತ್ತು ಸಾಲ ಮತ್ತು ಮುಂಗಡಗಳ ವಸೂಲಾತಿ (₹60ಕೋಟಿ) ಒಂದು ಪೈಸೆಗಿಂತ ಕಡಿಮೆಯಾದ್ದರಿಂದ ಮೇಲಿನ ಪೈ ಚಿತ್ರದಲ್ಲಿ ತೋರಿಸಿರುವದಿಲ್ಲ.

### 1.4.4 ವೆಚ್ಚದ ಉದ್ದೇಶ

ಸರ್ಕಾರವು ರಾಜ್ಯ ವಿಧಾನ ಮಂಡಲದ ಪೂರ್ವಾನುಮತಿಯೊಂದಿಗೆ ವಿವಿಧ ಕಾರ್ಯಕ್ರಮಗಳಿಗೆ, ಯೋಜನೆಗಳಿಗೆ ಮತ್ತು ವಸ್ತುನಿಷ್ಠ ವೆಚ್ಚಗಳಿಗೆ ಸಂಚಿತ ನಿಧಿಯಿಂದ ವೆಚ್ಚ ಮಾಡಲಾಗುತ್ತದೆ. ಪ್ರತಿ ರೂಪಾಯಿಯ ಮುಖ್ಯವಿಭಾಗವಾರು ವೆಚ್ಚವನ್ನು ಕೆಳಗಿನ ಪೈ ನಕ್ಷೆಯಲ್ಲಿ ನೀಡಲಾಗಿದೆ.



## 1.5 ಲೆಕ್ಕಗಳ ಮುಖ್ಯಾಂಶಗಳು

| ಕ್ರ ಸಂ. | ವಿವರಗಳು | ಆಯವ್ಯಯ ಅಂದಾಜು 2015–16 (₹ ಕೋಟಿ) | | ವಾಸ್ತವಿಕ (₹ ಕೋಟಿ) | | ವಾಸ್ತವಿಕ ಹಾಗೂ ಆಯವ್ಯಯ ಅಂದಾಜುಗಳ ಶೇಕಡಾವಾರು | ವಾಸ್ತವಿಕ ಹಾಗೂ ರಾ.ಒ.ಆಂ.ಉ.ದ ಶೇಕಡಾವಾರು |
|---|---|---|---|---|---|---|---|
| 01. | ತೆರಿಗೆ ರಾಜಸ್ವ | 101,235 | (@) | 99,533 | (&) | 98.32 | 13.52 |
| 02. | ತೆರಿಗೆಯೇತರ ರಾಜಸ್ವ | 5,206 | | 5,355 | | 102.86 | 0.73 |
| 03. | ಸಹಾಯಾನುದಾನಗಳು ಮತ್ತು ವಂತಿಗೆಗಳು | 9,919 | | 13,929 | | 140.43 | 1.89 |
| **04.** | **ರಾಜಸ್ವ ಜಮೆಗಳು (1+2+3)** | **116,360** | | **118,817** | | **102.11** | **16.14** |
| 05. | ಸಾಲಗಳು ಮತ್ತು ಮುಂಗಡಗಳ ವಸೂಲಾತಿ | 91 | | 60 | | 65.93 | 0.01 |
| 06. | ಇತರೆ ಜಮೆಗಳು ಇತರ ಬಂಡವಾಳ | 75 | | 352 | | 469.33 | 0.05 |
| 07. | ಋಣ ಮತ್ತು ಇತರೆ ಜವಾಬ್ದಾರಿಗಳು | 20,220 | (#) | 19,169 | ($) | 94.80 | 2.60 |
| **08.** | **ಬಂಡವಾಳ ಜಮೆಗಳು (5+6+7)** | **20,386** | | **19,581** | | **96.05** | **2.66** |
| **09.** | **ಒಟ್ಟಾರೆ ಜಮೆಗಳು (4+8)** | **136,746** | | **138,398** | | **101.20** | **18.80** |
| **10.** | **ಯೋಜನೇತರ ವೆಚ್ಚ (11+13)** | **78,840** | | **77,514** | | **98.32** | **10.53** |
| 11. | ರಾಜಸ್ವ ಲೆಕ್ಕ– ಯೋಜನೇತರ ವೆಚ್ಚ | 75,226 | | 77,019 | | 102.38 | 10.46 |
| 12. | 11ರಮೊತ್ತದಲ್ಲಿ ಬಡ್ಡಿ ಪಾವತಿ ಯೋಜನೇತರ | 10,668 | | 10,746 | (^) | 100.73 | 1.46 |
| 13. | ಬಂಡವಾಳ ಲೆಕ್ಕ–ಯೋಜನೇತರ ವೆಚ್ಚ | 614 | | 495 | | 80.63 | 0.07 |
| **14.** | **ಯೋಜನಾ ವೆಚ್ಚ (15+16)** | **60,906** | | **60,884** | | **99.96** | **8.27** |
| 15. | ರಾಜಸ್ವ ಲೆಕ್ಕ– ಯೋಜನಾ ವೆಚ್ಚ | 40,223 | | 40,010 | | 99.47 | 5.44 |
| 16. | ಬಂಡವಾಳ ವೆಚ್ಚ–ಯೋಜನಾ ವೆಚ್ಚ | 20,683 | | 20,874 | | 100.92 | 2.84 |
| **17.** | **ಒಟ್ಟಾರೆ ವೆಚ್ಚ {(10+14) = (18+19)}** | **136,746** | | **138,398** | | **101.21** | **18.80** |
| 18. | ರಾಜಸ್ವ ವೆಚ್ಚ (11+15) | 115,449 | | 117,029 | | 101.37 | 15.90 |
| 19. | ಬಂಡವಾಳ ವೆಚ್ಚ (13+16) | 21,297 | (a) | 21,369 | (b) | 100.34 | 2.90 |
| **20.** | **ರಾಜಸ್ವ ಹೆಚ್ಚಳ (4-18)** | **911** | | **1788** | | **196.27** | **0.24** |
| **21.** | **ವಿತ್ತೀಯ ಕೊರತೆ {(17) - (4+5+6) = 7}** | **20,220** | | **19,169** | | **94.80** | **2.60** |

| | |
|---|---|
| (*) | 2015–16ನೇ ವರ್ಷದ ರಾ.ಒ.ಆಂ.ಉ : ₹735,975 ಕೋಟಿ (ಆಕರ : ಮಧ್ಯಂತರ ವಿತ್ತೀಯ ಯೋಜನೆ 2016–20). |
| @ | ₹24,790 ಕೋಟಿ ರಾಜ್ಯ ಪಾಲಿನ ಕೇಂದ್ರೀಯ ತೆರಿಗೆಗಳು ಮತ್ತು ಸುಂಕಗಳನ್ನೊಳಗೊಂಡಿದೆ. |
| (&) | ₹23,983 ಕೋಟಿ ರಾಜ್ಯದ ಪಾಲಿನ ಕೇಂದ್ರೀಯ ತೆರಿಗೆಗಳು ಮತ್ತು ಸುಂಕಗಳನ್ನೊಳಗೊಂಡಿದೆ. |
| (#) | ಇದು (i) ಸಾರ್ವಜನಿಕ ಋಣ (₹17,162 ಕೋಟಿ) (ii) ಸಾರ್ವಜನಿಕ ಲೆಕ್ಕ (₹2,667 ಕೋಟಿ) ಮೊತ್ತದಲ್ಲಿ ಕಳೆದ (iii) ನಿವ್ವಳ ನಗದು ಶಿಲ್ಕು {₹(–)391 ಕೋಟಿ} ಒಳಗೊಂಡಿರುತ್ತದೆ. |
| ($) | ಇದು (i) ಸಾರ್ವಜನಿಕ ಋಣ (₹16,962 ಕೋಟಿ) (ii) ಸಾದಿಲ್ವಾರು ನಿಧಿ (ಇಲ್ಲ) ಮತ್ತು (iii) ಸಾರ್ವಜನಿಕ ಲೆಕ್ಕ (₹2,127 ಕೋಟಿ) ಮೊತ್ತದಲ್ಲಿ ಕಳೆದ (iv) ನಿವ್ವಳ ನಗದು ಶಿಲ್ಕು {₹ (-) 80 ಕೋಟಿ} ಒಳಗೊಂಡಿರುತ್ತದೆ. |
| (a) | ಬಂಡವಾಳ ವೆಚ್ಚ (₹ 17,627 ಕೋಟಿ), ಸಾಲಗಳು ಮತ್ತು ಮುಂಗಡಗಳು (₹753 ಕೋಟಿ) ಇವುಗಳ ಅಂದಾಜನ್ನು ಒಳಗೊಂಡಿರುತ್ತದೆ. |
| (b) | ಬಂಡವಾಳ ವೆಚ್ಚ (₹20,713 ಕೋಟಿ) ಮತ್ತು ಸಾಲಗಳು ಮತ್ತು ಮುಂಗಡಗಳು (₹656 ಕೋಟಿ) ಇವುಗಳನ್ನು ಒಳಗೊಂಡಿರುತ್ತದೆ. |
| (^) | ಆಯವ್ಯಯದ ಹೊರಗಿನ ಸಾಲಗಳ ಮೇಲಿನ ಬಡ್ಡಿ (597 ಕೋಟಿ) ಪಾವತಿಯನ್ನು ಹೊರತುಪಡಿಸಿದೆ ಹಾಗೂ ಇದು ಸಾಮಾನ್ಯ ಸೇವೆಗಳು, ಸಾಮಾಜಿಕ ಸೇವೆಗಳು ಮತ್ತು ಆರ್ಥಿಕ ಸೇವೆಗಳಡಿ ಇರುವ ಇತರೆ ಕಾರ್ಯಿಕ ಪ್ರಧಾನ ಲೆಕ್ಕ ಶೀರ್ಷಿಕೆಗಳಲ್ಲಿ ಪಾವತಿಯಾಗಿದೆ. |

## 1.6 ಕೊರತೆ ಮತ್ತು ಹೆಚ್ಚಳಗಳ ವ್ಯಾಖ್ಯೆ

| | |
|---|---|
| **ಕೊರತೆ** | ಆದಾಯ ಮತ್ತು ವೆಚ್ಚಗಳ ನಡುವಿನ ಅಂತರಕ್ಕೆ ಸಂಬಂಧಿಸಿದೆ. ಕೊರತೆಯ ವಿಧ, ಕೊರತೆಯನ್ನು ಹೇಗೆ ನಿಭಾಯಿಸಲಾಗಿದೆ ಮತ್ತು ನಿಧಿಗಳ ಬಳಕೆಯು ಹಣಕಾಸು ನಿರ್ವಹಣೆಯಲ್ಲಿನ ವಿವೇಚನೆಯ ಮುಖ್ಯ ಸೂಚಕಗಳಾಗಿವೆ. |
| **ರಾಜಸ್ವ ಕೊರತೆ/ಹೆಚ್ಚಳ** | ರಾಜಸ್ವ ಸ್ವೀಕೃತಿಗಳು ಮತ್ತು ರಾಜಸ್ವ ವೆಚ್ಚದ ನಡುವಿನ ಅಂತರವನ್ನು ಸೂಚಿಸುತ್ತದೆ. ಅಸ್ತಿತ್ವದಲ್ಲಿರುವ ಸರ್ಕಾರದ ಸಂಸ್ಥೆಗಳ ನಿರ್ವಹಣೆಗೆ ರಾಜಸ್ವ ವೆಚ್ಚದ ಅಗತ್ಯವಿದೆ. ವಾಸ್ತವದಲ್ಲಿ ಇದನ್ನು ರಾಜಸ್ವ ಸ್ವೀಕೃತಿಗಳಲ್ಲಿಯೇ ಪೂರ್ಣವಾಗಿ ಭರಿಸಬೇಕು. |
| **ವಿತ್ತೀಯ ಕೊರತೆ/ಹೆಚ್ಚಳ** | ಒಟ್ಟು ಸ್ವೀಕೃತಿಗಳು (ಸ್ವೀಕೃತಿಗಳು/ಮರುಪಾವತಿಗಳನ್ನು ಹೊರತುಪಡಿಸಿ) ಮತ್ತು ಒಟ್ಟು ವೆಚ್ಚಗಳ ನಡುವಿನ ಅಂತರವನ್ನು ಸೂಚಿಸುತ್ತದೆ. ಹಾಗಾಗಿ, ಈ ಅಂತರವು ಸಾಲಗಳ ಮೂಲಕ ಭರಿಸಲ್ಪಟ್ಟ ವೆಚ್ಚದ ಪ್ರಮಾಣವನ್ನು ಸೂಚಿಸುತ್ತದೆ. ವಾಸ್ತವವಾಗಿ ಸಾಲಗಳ ಮೂಲಕ ಪಡೆದ ಮೊತ್ತವನ್ನು ಬಂಡವಾಳ ಯೋಜನೆಗಳಲ್ಲಿ ಹೂಡಬೇಕಾಗಿರುತ್ತದೆ. |

ಕೊರತೆ ಸೂಚಕಗಳು, ಆದಾಯದ ವೃದ್ಧಿ ಮತ್ತು ವೆಚ್ಚ ನಿರ್ವಹಣೆಗಳು ಸರ್ಕಾರದ ವಿತ್ತ ನಿರ್ವಹಣೆಯ ಮಾಪನಕ್ಕೆ ಪ್ರಮುಖ ಮಾನದಂಡಗಳಾಗಿವೆ.

ವಿತ್ತೀಯ ಹೊಣೆಗಾರಿಕೆಗೆ ಸಂಬಂಧಿಸಿದ ಕಾಯ್ದೆಗಳಾದ ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಅಧಿನಿಯಮ, 2002, ಮತ್ತು ಕರ್ನಾಟಕ ಸರ್ಕಾರಿ ಖಾತರಿಗಳ ಮೇಲೆ ಗರಿಷ್ಠ ಪರಿಮಿತಿ ಅಧಿನಿಯಮ (ಕೆಸಿಜಿಜಿಎ), 1999, ಗಳನ್ನು ಅಂಗೀಕರಿಸಿದ ನಂತರದಲ್ಲಿ ರಾಜ್ಯ ಸರ್ಕಾರವು ವಿತ್ತೀಯ ಕ್ರೋಢೀಕರಣ ಮಾರ್ಗದಲ್ಲಿ ನಿರಂತರವಾಗಿ ಸಾಗಿದೆ.

ಸರ್ಕಾರದ ಆರ್ಥಿಕ ಪರಿಸ್ಥಿತಿ ಮತ್ತು ಹೊಣೆಗಾರಿಕೆಗಳ ನಿರ್ವಹಣೆಯಲ್ಲಿ ಹೆಚ್ಚು ಪಾರದರ್ಶಕತೆಯನ್ನು ತರುವ ಸಲುವಾಗಿ 2011ರಲ್ಲಿ ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಅಧಿನಿಯಮಕ್ಕೆ ತಿದ್ದುಪಡಿ ತರಲಾಯಿತು. ಪ್ರಸ್ತುತ ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಅಧಿನಿಯಮದ ಹೊಸದಾಗಿ ಜಾರಿಗೆ ತರಲಾದ 5(2)(ಸಿ)ನೇ ಪ್ರಕರಣವು, ಇತರ ವಿಷಯಗಳೊಂದಿಗೆ ವರ್ಷದಲ್ಲಿ ಪ್ರಮುಖ ಕಾರ್ಯನೀತಿ ತೀರ್ಮಾನಗಳನ್ನು ತೆಗೆದುಕೊಂಡ ಕಾರಣದಿಂದಾಗಿ ಭವಿಷ್ಯದ ವೆಚ್ಚದ ಬದ್ಧತೆಗಳು ಮತ್ತು ವ್ಯಕ್ತ ಮತ್ತು ಅವ್ಯಕ್ತ ಹೊಣೆಗಾರಿಕೆಗಳ ಬಗ್ಗೆ ಸ್ಪಷ್ಟವಾದ ಪ್ರಕಟಣೆಗಳನ್ನು ಮಾಡುವಂತೆ ರಾಜ್ಯ ಸರ್ಕಾರಕ್ಕೆ ಆಜ್ಞಾಪಿಸುತ್ತದೆ. ರಾಜ್ಯ ಸರ್ಕಾರವು ವಿಧಾನ ಮಂಡಲದಲ್ಲಿ ಕ್ರಮವಾಗಿ ಮಂಡಿಸುವ ಮಧ್ಯಮಾವಧಿ ವಿತ್ತೀಯ ಯೋಜನೆಗಳ ಮೂಲಕ ಈ ಮಾಹಿತಿಯನ್ನು ಒದಗಿಸುತ್ತಾ ಬಂದಿದೆ. ಒಟ್ಟು ಹೊಣೆಗಾರಿಕೆಯನ್ನು ಲೆಕ್ಕಾಚಾರ ಮಾಡುವಾಗ ಆಯವ್ಯಯೇತರ ಸಾಲವನ್ನು ರಾಜ್ಯದ ಸ್ವಂತ ಹೊಣೆಗಾರಿಕೆಯ ಭಾಗವಾಗಿ ವರದಿ ಮಾಡಬೇಕಾದ ಅನುಸರಣಾ ನೀತಿಗೆ ಬದ್ಧವಾಗಿರಲು ಫೆಬ್ರವರಿ 2014ರಲ್ಲಿ ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮ, 2002ಕ್ಕೆ ತಿದ್ದುಪಡಿ ತರಲಾಯಿತು.

ಅನುಸರಿಸಬೇಕಾದ ಪ್ರಮುಖ ವಿತ್ತೀಯ ಮತ್ತು ಋಣದ ಮಾನದಂಡಗಳು ಮತ್ತು ರಾಜ್ಯದ ಅನುಸರಣಾ ಮಾಹಿತಿಯ ವಿವರಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ತೋರಿಸಲಾಗಿದೆ.


| ಕ್ರಮ ಸಂಖ್ಯೆ | ವಿವರಗಳು | ಶಾಸನಬದ್ಧ ಗುರಿ | ರಾಜ್ಯದ ಸಾಧನೆ |
|---|---|---|---|
| 1 | **ರಾಜಸ್ವ ಕೊರತೆ** | 31.03.2006ರ ಹೊತ್ತಿಗೆ ರಾಜಸ್ವ ಕೊರತೆಯನ್ನು ಶೂನ್ಯಕ್ಕೆ ಇಳಿಸುವುದು. | ಆರ್ಥಿಕ ವರ್ಷ 2004–05ರಲ್ಲಿಯೇ ಗುರಿಯನ್ನು ಸಾಧಿಸಲಾಗಿದೆ. 2015–16ರಲ್ಲಿ ಸರ್ಕಾರವು ₹1,788.73 ಕೋಟಿ ರಾಜಸ್ವ ಹೆಚ್ಚಳದೊಂದಿಗೆ ಗುರಿಯನ್ನು ಕಾಯ್ದುಕೊಂಡಿದೆ |
| 2 | **ವಿತ್ತೀಯ ಕೊರತೆ** | 31.03.2006ರೊಳಗೆ ವಿತ್ತೀಯ ಕೊರತೆಯನ್ನು ಅಂದಾಜಿಸಿದ ಜಿಎಸಡಿಪಿಯ ಶೇಕಡ 3ಕ್ಕಿಂತ ಅಧಿಕಗೊಳ್ಳದಂತೆ ಇಳಿಸುವುದು. | ವಿತ್ತೀಯ ಕೊರತೆಯು ₹19,168.73 ಕೋಟಿಗಳಷ್ಟಿದ್ದು ರಾ.ಒ.ಆಂ.ಉ. ದ ಶೇಕಡಾ 2.60ರಷ್ಟಿದೆ. |
| 3 | **ಬಾಕಿಯಿರುವ ಜವಾಬ್ದಾರಿಗಳು** | 31.03.2016ರ ವೇಳೆಗೆ ಒಟ್ಟು ಹೊಣೆಗಾರಿಕೆ ಹಾಗೂ ಜಿಎಸಡಿಪಿಯ ಅನುಪಾತವು ಶೇಕಡ 25.2ನ್ನು ಮೀರದಿರುವುದನ್ನು ಖಚಿತಪಡಿಸಿಕೊಳ್ಳುವುದು. | 31ನೇ ಮಾರ್ಚ್ 2016ಕ್ಕೆ ಬಾಕಿಯಿರುವ ಜವಾಬ್ದಾರಿ (₹1,83,321.77 ಕೋಟಿ) ರಾ.ಒ.ಆಂ.ಉ. ದ ಶೇಕಡಾ 24.91 ರಷ್ಟಿರುತ್ತದೆ. |
| 4 | **ಖಾತರಿಗಳು** | ಬಾಕಿ ಉಳಿದ ಖಾತರಿಯು ಯಾವದೇ ವರ್ಷದ ಏಪ್ರಿಲ್ 1ರಂದು ಅದಕ್ಕೆ ಹಿಂದಿನ ಎರಡನೇ ವರ್ಷದ ರಾಜಸ್ವ ಸ್ವೀಕೃತಿಯ ಶೇ.80ನ್ನು ಮೀರಬಾರದು. | 2015–2016ರ ಪ್ರಾರಂಭದಲ್ಲಿ ಬಾಕಿ ಉಳಿದ ಖಾತರಿಗಳು ₹11,167.64 ಕೋಟಿಯಷ್ಟಿದ್ದು, ಇದು ಎರಡನೇ ಹಿಂದಿನ ವರ್ಷ 2013–14 ರ ಒ.ರಾ.ಜ. ದ (₹89,542.53 ಕೋಟಿ) ಶೇಕಡಾ 12.47ರಷ್ಟಿದೆ. |
| ಸೂಚನೆ 1 | ಭಾರತ ಸರ್ಕಾರದ ವಿತ್ತ ಸಚಿವಾಲಯ ತಿಳಿಸಿರುವಂತೆ ರಾ.ಒ.ಆಂ.ಉ. ₹735,975 ಕೋಟಿ (ಆಕರ: ಕರ್ನಾಟಕ ಸರ್ಕಾರದ ಎಮ್.ಟಿ.ಎಫ್.ಪಿ 2016–20) | | |
| ಸೂಚನೆ 2 | ಕರ್ನಾಟಕ ಸರ್ಕಾರ ಒದಗಿಸಿರುವ ಆಯವ್ಯಯದ ಹೊರಗಿನ ಸಾಲಗಳ ಮೊತ್ತದ ಬಾಕಿಯಿರುವ ಜವಾಬ್ದಾರಿ (₹7,698.69 ಕೋಟಿಗಳು ಹಾಗೂ ಕ.ಹ.ಜ (ತಿದ್ದುಪಡಿ) ಅದಿನಿಯಮ 2014ರ ಪ್ರಕಾರ) ಸಂಚಿತ ನಿಧಿಯ ಜವಾಬ್ದಾರಿಗಳೂ ಮತ್ತು ಸಾರ್ವಜನಿಕ ಲೆಕ್ಕಗಳ ಜವಾಬ್ದಾರಿ ಸೇರಿ ₹175,623.08 ಕೋಟಿ ಆಗಿರುತ್ತದೆ. | | |

### *1.6.1 ರಾಜಸ್ವ ಹೆಚ್ಚಳದ ಪ್ರವೃತ್ತಿ*

ರಾಜಸ್ವ ಹೆಚ್ಚಳವು ಸರ್ಕಾರದ ರಾಜಸ್ವ ವೆಚ್ಚಕ್ಕಿಂತ ರಾಜಸ್ವ ಸ್ವೀಕೃತಿಗಳ ನಿವ್ವಳ ಅಧಿಕ್ಯವನ್ನು ಸೂಚಿಸುತ್ತದೆ. 2011–2012 ರಿಂದ 2015–2016ರವರೆಗಿನ ರಾಜಸ್ವ ಹೆಚ್ಚಳದ ಪ್ರವೃತ್ತಿಯನ್ನು ಈ ಕೆಳಗಿನ ಕೋಷ್ಟಕದಲ್ಲಿ ಹಾಗೂ ನಕ್ಷೆಯಲ್ಲಿ ನೀಡಲಾಗಿದೆ.

(₹ ಕೋಟಿಗಳಲ್ಲಿ)

| | 2011–12 | 2012–13 | 2013–14 | 2014–15 | 2015–16 |
|---|---|---|---|---|---|
| ರಾಜಸ್ವ ಹೆಚ್ಚಳ | 4,521 | 1,883 | 353 | 528 | 1,788 |
| ರಾ. ಒ. ಆಂ ಉ. * | 434,270 | 520,766 | 601,633 | 685,207 | 735,975 |
| ರಾ.ಒ.ಆಂ.ಉ.ದ ಶತಾಂಶವಾಗಿ ರಾ.ಹೆಚ್ಚಳ | 1.04 | 0.36 | 0.06 | 0.08 | 0.24 |
| * ರಾ.ಒ.ಆಂ.ಉ.2015–16 ಆಕರ : ಮಧ್ಯಂತರ ವಿತ್ತೀಯ ಯೋಜನೆ 2016–20 | | | | | |





### *1.6.2 ವಿತ್ತೀಯ ಕೊರತೆಯ ಪ್ರವೃತ್ತಿ*

ವಿತ್ತೀಯ ಕೊರತೆಯನ್ನು ಒಟ್ಟು ವೆಚ್ಚ (ರಾಜಸ್ವ + ಬಂಡವಾಳ + ನಿವ್ವಳ ಸಾಲ ಮತ್ತು ಮುಂಗಡಗಳು) ದಲ್ಲಿ ರಾಜಸ್ವ ಸ್ವೀಕೃತಿಗಳು ಮತ್ತು ಇತರೆ ಬಂಡವಾಳ ಸ್ವೀಕೃತಿಗಳನ್ನು ಕಳೆದು ಲೆಕ್ಕ ಮಾಡಲಾಗುತ್ತದೆ. 2011–2012 ರಿಂದ 2015–2016 ರವರೆಗಿನ ವಿತ್ತೀಯ ಕೊರತೆಯ ಪ್ರವೃತ್ತಿಯನ್ನು ಈ ಕೆಳಗಿನ ಕೋಷ್ಟಕದಲ್ಲಿ ಹಾಗೂ ನಕ್ಷೆಯಲ್ಲಿ ನೀಡಲಾಗಿದೆ.

(₹ ಕೋಟಿಗಳಲ್ಲಿ)

| | 2011–12 | 2012–13 | 2013–14 | 2014–15 | 2015–16 |
|---|---|---|---|---|---|
| ವಿತ್ತೀಯ ಕೊರತೆ | 12,470 | 14,507 | 17,092 | 19,576 | 19,169 |
| ರಾ. ಒ. ಆಂ ಉ.* | 434,270 | 520,766 | 601,633 | 685,207 | 735,975 |
| ರಾ.ಒ.ಆಂ.ಉ.ದ ಶತಾಂಶವಾಗಿ ವಿತ್ತೀಯ ಕೊರತೆ | 2.87 | 2.79 | 2.84 | 2.86 | 2.60 |
| * ರಾ.ಒ.ಆಂ.ಉ. ಆಕರ : ಮಧ್ಯಂತರ ವಿತ್ತೀಯ ಯೋಜನೆ 2016–20. | | | | | |




### *1.6.3 ಸರ್ಕಾರದ ಲೆಕ್ಕಗಳು*

ಆಯಾ ವರ್ಷದ ಒಟ್ಟು ವೆಚ್ಚಕ್ಕೂ (ರಾಜಸ್ವ ಮತ್ತು ಬಂಡವಾಳ ವೆಚ್ಚಗಳೆರಡೂ ಸೇರಿ) ವರ್ಷದ ಒಟ್ಟು ಆದಾಯಕ್ಕೂ (ರಾಜಸ್ವ ಮತ್ತು ಋಣ ಹೊರತು ಪಡಿಸಿದ ಬಂಡವಾಳ ಆದಾಯಗಳು) ಇರುವ ನಿವ್ವಳ ಹೆಚ್ಚಳ / ಕೊರತೆಯ ವ್ಯತ್ಯಾಸವನ್ನು 'ಸರ್ಕಾರದ ಲೆಕ್ಕ' ಎಂದು ಕರೆಯಲಾಗುವ ಪ್ರತ್ಯೇಕ ಖಾತೆಗೆ ವರ್ಗಾಯಿಸಲಾಗುವುದು. ಜೊತೆಗೆ, ಹಿಂದಿನ ವರ್ಷದ ಲೆಕ್ಕಗಳ ಹೊಂದಾಣಿಕೆ ಮತ್ತು ಇತರೆ ಸರ್ಕಾರಿ ಲೆಕ್ಕಗಳ ನಿವ್ವಳ ಪರಿಣಾಮದ ಅಂಶಗಳನ್ನು 'ಸರ್ಕಾರದ ಲೆಕ್ಕ' ಖಾತೆಗೆ ವರ್ಗಾಯಿಸಲಾಗುವುದು.

ಹೀಗೆ 'ಸರ್ಕಾರದ ಲೆಕ್ಕ'ದ ಖಾತೆಯು ವರ್ಷಾನುವರ್ಷ ಸರ್ಕಾರದ ವ್ಯವಹಾರಗಳಿಂದುಂಟಾದ ಆರ್ಥಿಕ ಹೆಚ್ಚಳ / ಕೊರತೆಗಳ ಸಂಚಿತ ಪರಿಣಾಮವನ್ನು ನಿರೂಪಿಸುತ್ತದೆ. "ಸರ್ಕಾರ ಲೆಕ್ಕ"ಗಳ ಹಿಂದಿನ ಐದು ವರ್ಷಗಳ ಖಾತೆಯ ವಿವರಗಳು ಈ ಕೆಳಗಿನಂತಿವೆ:

(₹ ಕೋಟಿಗಳಲ್ಲಿ)

| ವರ್ಷ | ರಾಜಸ್ವ ಶೀರ್ಷಿಕೆ | | | ಬಂಡವಾಳ ಶೀರ್ಷಿಕೆ | | | ಇತರೆ ಶೀರ್ಷಿಕೆ (#) ಹೆಚ್ಚಳ (+) ಕೊರತೆ (–) | ಸದರಿ ಸಾಲಿನ ಕೊರತೆ (–) | ಸಂಚಿತ ಹೆಚ್ಚಳ (+) ಕೊರತೆ (–) ವರ್ಷಾಂತ್ಯಕ್ಕೆ |
|---|---|---|---|---|---|---|---|---|---|
| | ಜಮೆ | ಬಟವಾಡೆ | ಹೆಚ್ಚಳ (+) ಕೊರತೆ (–) | ಜಮೆ | ಬಟವಾಡೆ | ಹೆಚ್ಚಳ (+) ಕೊರತೆ (–) | | | |
| 2011-12 | 69,806 | 65,115 | (+) 4,521 | 89 | 15,506 | (-) 15,417 | (+) 55 | (-) 10,841 | (-) 90,707 |
| 2012-13 | 78,176 | 76,293 | (+) 1,883 | 33 | 15,479 | (-) 15,446 | … | (-) 13,563 | (-) 104,270 |
| 2013-14 | 89,543 | 89,190 | (+) 353 | 88 | 16,947 | (-) 16,859 | … | (-) 16,506 | (-) 120,776 |
| 2014-15 | 104,142 | 103,614 | (+) 528 | 10 | 19,622 | (-) 19,612 | … | (-) 19,084 | (-) 139,860 |
| 2015-16 | 118,817 | 117,029 | (+) 1,788 | 352 | 20,713 | (-)20,361 | … | (-) 18,573 | (-) 158,433 |
| (#) | ಇತರೆ ಸರ್ಕಾರದ ಲೆಕ್ಕ. | | | | | | | | |

### *1.6.4 ಸಾಲದ ಮೊತ್ತದಲ್ಲಿ ಬಂಡವಾಳ ವೆಚ್ಚಕ್ಕೆ ಬಳಸಿದ ಪ್ರಮಾಣ*

ಸಾಲವಾಗಿ ಪಡೆದ ಮೊತ್ತವನ್ನು ಪೂರ್ಣವಾಗಿ ಬಂಡವಾಳ ಆಸ್ತಿ ನಿರ್ಮಾಣಕ್ಕೆ ಬಳಸಿ ರಾಜಸ್ವ ಸ್ವೀಕೃತಿಗಳನ್ನು ಬಡ್ಡಿಪಾವತಿಗೆ ಉಪಯೋಗಿಸುವುದು ಸೂಕ್ತ. ಆದರೆ, ರಾಜ್ಯ ಸರ್ಕಾರವು ಪ್ರಸಕ್ತ ಸಾಲಿನ ಸಾಲದ ಮೊತ್ತವನ್ನು ಸಂಪೂರ್ಣವಾಗಿ (₹21,072 ಕೋಟಿ) ಸಾಲ ಮತ್ತು ಮುಂಗಡಗಳ ವಿತರಣೆಯಲ್ಲಿ ಸೇರಿದಂತೆ ಬಂಡವಾಳ ವೆಚ್ಚಕ್ಕೆ (₹21,369 ಕೋಟಿ) ಖರ್ಚು ಮಾಡಲಾಗಿದೆ.

# ಅಧ್ಯಾಯ–II

## ಸ್ವೀಕೃತಿಗಳು


### 2.1 ಪೀಠಿಕೆ

ಸರ್ಕಾರದ ಸ್ವೀಕೃತಿಗಳನ್ನು ರಾಜಸ್ವ ಸ್ವೀಕೃತಿಗಳು ಮತ್ತು ಬಂಡವಾಳ ಸ್ವೀಕೃತಿಗಳು ಎಂದು ವರ್ಗೀಕರಿಸಲಾಗಿದೆ. 2015–16ನೇ ಸಾಲಿನ ಒಟ್ಟು ಸ್ವೀಕೃತಿಗಳು ₹118,817 ಕೋಟಿಗಳಷ್ಟಿದ್ದು, ಇದು ರಾಜ್ಯದ ಪಾಲಿನ ಕೇಂದ್ರೀಯ ತೆರಿಗೆಗಳು ಮತ್ತು ಸುಂಕಗಳು ₹23,983 ಕೋಟಿ ಒಳಗೊಂಡು, ತೆರಿಗೆ ರಾಜಸ್ವ (₹99,533 ಕೋಟಿ,) ತೆರಿಗೆಯೇತರ ರಾಜಸ್ವ (₹5,355 ಕೋಟಿ), ಕೇಂದ್ರ ಸರ್ಕಾರದ ಸಹಾಯಾನುದಾನ ಮತ್ತು ವಂತಿಗೆಗಳು (₹13,929 ಕೋಟಿ). ಬಂಡವಾಳ ಸ್ವೀಕೃತಿಯಲ್ಲಿ (₹19,581 ಕೋಟಿ), ಸಾಲ ಮತ್ತು ಮುಂಗಡಗಳ ವಸೂಲಾತಿ (₹60 ಕೋಟಿ) ಇತರೆ ಬಂಡವಾಳ ಸ್ವೀಕೃತಿಗಳು (₹352 ಕೋಟಿ) ಮತ್ತು 'ಸಾಲಗಳು ಮತ್ತು ಇತರೆ ಜವಾಬ್ದಾರಿಗಳು' (₹19,169 ಕೋಟಿ) ಒಳಗೊಂಡಿದೆ. ಸಾಲಗಳು ಮತ್ತು ಇತರೆ ಜವಾಬ್ದಾರಿ(₹19,169 ಕೋಟಿ)ಯು, (1) "ಸಾರ್ವಜನಿಕ ಋಣ" (₹16,962 ಕೋಟಿ) (2) "ಸಾದಿಲ್ವಾರು ನಿಧಿ" (ಇಲ್ಲ), (3) "ಸಾರ್ವಜನಿಕ ಲೆಕ್ಕ" (₹2,127 ಕೋಟಿ) ಇವುಗಳ ಮೊತ್ತದಲ್ಲಿ ಕಳೆದ (4) "ನಿವ್ವಳ ನಗದು ಶಿಲ್ಕು" ₹(-) 80 ಕೋಟಿಯನ್ನು ಒಳಗೊಂಡಿದೆ.

### 2.2 ರಾಜಸ್ವ ಸ್ವೀಕೃತಿಗಳು

ರಾಜ್ಯ ಸರ್ಕಾರದ ರಾಜಸ್ವ ಸ್ವೀಕೃತಿಗಳು ರಾಜ್ಯದ ಸ್ವಂತ ತೆರಿಗೆ ಮತ್ತು ಕೇಂದ್ರ ತೆರಿಗೆ ಮತ್ತು ಸುಂಕಗಳಲ್ಲಿನ ಪಾಲನ್ನೊಳಗೊಂಡಂತೆ 'ತೆರಿಗೆ ರಾಜಸ್ವ', 'ತೆರಿಗೆಯೇತರ ರಾಜಸ್ವ' ಮತ್ತು 'ಕೇಂದ್ರ ಸರ್ಕಾರದ ಸಹಾಯಾನುದಾನಗಳು ಮತ್ತು ವಂತಿಗೆಗಳು' ಎಂಬ ಮೂರು ಮುಖ್ಯ ಮೂಲಗಳಿಂದ ಒಳಗೊಂಡಿದೆ. ಒಟ್ಟು ರಾಜಸ್ವದ ಸ್ವೀಕೃತಿಗೆ ಶತಾಂಶ ವಿಭಾಗೀಯ ರಾಜಸ್ವ ಸೀಕೃತಿಯನ್ನು ಕೆಳಗಿನ ಪೈ ನಕ್ಷೆಯಲ್ಲಿ ತೋರಿಸಲಾಗಿದೆ.

| | |
|---|---|
| **ತೆರಿಗೆ ರಾಜಸ್ವ** | ಇದು ರಾಜ್ಯ ಸರ್ಕಾರವು ಸಂಗ್ರಹಿಸಿ ಉಳಿಸಿಕೊಂಡ ತೆರಿಗೆಗಳು ಮತ್ತು ಸುಂಕಗಳು ಮತ್ತು ಸಂವಿಧಾನದ ಅನುಚ್ಛೇದ 280 (3) ರ ಅನ್ವಯ ಕೇಂದ್ರ ತೆರಿಗೆಗಳು ಮತ್ತು ಸುಂಕಗಳಲ್ಲಿನ ರಾಜ್ಯದ ಪಾಲನ್ನು ಒಳಗೊಂಡಿದೆ. |
| **ತೆರಿಗೆಯೇತರ ರಾಜಸ್ವ** | ಇದರಲ್ಲಿ ಬಡ್ಡಿ ಸ್ವೀಕೃತಿ, ಲಾಭಾಂಶಗಳು ಮತ್ತು ಲಾಭಗಳು ಮತ್ತು ಇತರ ಇಲಾಖಾ ಸ್ವೀಕೃತಿಗಳು ಸೇರಿವೆ. |
| **ಸಹಾಯಾನುದಾನಗಳು ಮತ್ತು ವಂತಿಗೆಗಳು** | ಇದು ರಾಜ್ಯ ಸರ್ಕಾರಕ್ಕೆ ಕೇಂದ್ರ ನೀಡಿದ ಸಹಾಯವಾಗಿದ್ದು ಇದರಲ್ಲಿ ಕೇಂದ್ರ ಸರ್ಕಾರದ ಮೂಲಕ ವಿದೇಶಿ ಸರ್ಕಾರಗಳಿಂದ ಪಡೆದ ಬಾಹ್ಯ ಅನುದಾನ ಸಹಾಯ ಮತ್ತು ಸಹಾಯ ಸಾಮಗ್ರಿಗಳು ಮತ್ತು ಸಾಧನಗಳು ಸೇರಿವೆ. |



### *2.2.1 ರಾಜಸ್ವ ಸ್ವೀಕೃತಿಗಳ ಅಂಶಗಳು*

ಒಟ್ಟು ರಾಜಸ್ವ ಸ್ವೀಕೃತಿಗಳಿಗೆ 'ತೆರಿಗೆ ರಾಜಸ್ವ' ಮತ್ತು 'ತೆರಿಗೆಯೇತರ ರಾಜಸ್ವ'ಗಳ ಶತಾಂಶವನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

| ಭಾಗಗಳು | ವಾಸ್ತವಿಕ (₹ ಕೋಟಿಗಳಲ್ಲಿ) | ಒಟ್ಟು ರಾಜಸ್ವ ಜಮೆಗೆ ಶೇಕಡಾವಾರು |
|---|---|---|
| **ಅ. ತೆರಿಗೆ ರಾಜಸ್ವ (*)** | **99,533** | **84** |
| ವರಮಾನ ಮತ್ತು ವೆಚ್ಚದ ಮೇಲಿನ ತೆರಿಗೆಗಳು | 13,653 | 12 |
| ಆಸ್ತಿ ಮತ್ತು ಬಂಡವಾಳ ವ್ಯವಹಾರಗಳ ಮೇಲಿನ ತೆರಿಗೆಗಳು | 8,397 | 07 |
| ಸರಕು ಮತ್ತು ಸೇವೆಗಳ ಮೇಲಿನ ತೆರಿಗೆ | 77,483 | 65 |
| **ಬ. ತೆರಿಗೆಯೇತರ ರಾಜಸ್ವ** | **5,355** | **4** |
| ಬಡ್ಡಿ ಜಮೆಗಳು, ಲಾಭ ಮತ್ತು ಲಾಭಾಂಶಗಳು | 1,362 | 1 |
| ಸಾಮಾನ್ಯ ಸೇವೆಗಳು | 844 | 1 |
| ಸಾಮಾಜಿಕ ಸೇವೆಗಳು | 549 | ... |
| ಆರ್ಥಿಕ ಸೇವೆಗಳು | 2,600 | 12 |
| **ಕ. ಸಹಾಯಾನುದಾನಗಳು ಮತ್ತು ವಂತಿಗೆಗಳು** | **13,929** | **12** |
| **ಒಟ್ಟು ರಾಜಸ್ವ ಜಮೆಗಳು** | **118,817** | **100** |
| (*) ಕೇಂದ್ರ ಸರ್ಕಾರದಿಂದ ಹಂಚಲಾದ ತೆರಿಗೆ ಮತ್ತು ಸುಂಕಗಳಲ್ಲಿನ ರಾಜ್ಯದ ಪಾಲು ₹23,983 ಕೋಟಿ (ರಾಜಸ್ವ ಜಮೆಯ ಶೇ. 20.18) ಒಳಗೊಂಡಿದೆ. | | |

ಒಟ್ಟು ತೆರಿಗೆ ಆದಾಯ ₹99,533 ಕೋಟಿ ಮತ್ತು ತೆರಿಗೆಯೇತರ ಆದಾಯ ₹5,355 ಕೋಟಿ ಕ್ರಮವಾಗಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ* ಶೇಕಡ 13.52 ಮತ್ತು ಶೇಕಡ 0.73 ರಷ್ಟಿವೆ.

### *2.2.2 ಆದಾಯದ ಪ್ರಮುಖ ಮೂಲಗಳು*

'ರಾಜಸ್ವ ತೆರಿಗೆ'ಗೆ ಪ್ರಮುಖ ಮೂಲಗಳ ರಾ. ಒ.ಆಂ.ಉ. ಶೇಕಡಾವಾರನ್ನು ಈ ಕೆಳಗೆ ನೀಡಲಾಗಿದೆ.

| ಲೆಕ್ಕ ಶೀರ್ಷಿಕೆ | (₹ಕೋಟಿಗಳಲ್ಲಿ) | ರಾ.ಒ.ಆಂ.ಉ.ಯ ಶೇಕಡಾವಾರು |
|---|---|---|
| ಮಾರಾಟ, ವ್ಯಾಪಾರ ಮುಂತಾದವುಗಳ ಮೇಲಿನ ತೆರಿಗೆಗಳು | 40,449 | 5.50 |
| ರಾಜ್ಯ ಅಬಕಾರಿ | 15,333 | 2.08 |
| ಮುದ್ರಾಂಕ ಮತ್ತು ನೋಂದಣಿ ಶುಲ್ಕ | 8,215 | 1.12 |
| ನಿಗಮ ತೆರಿಗೆ | 7,548 | 1.03 |
| ವಾಹನ ಮೇಲಿನ ತೆರಿಗೆಗಳು | 5,002 | 0.68 |
| ನಿಗಮ ತೆರಿಗೆ ಹೊರತಾಗಿ ವರಮಾನದ ಮೇಲಿನ ತೆರಿಗೆಗಳು | 5,252 | 0.71 |
| ಸರಕು ಮತ್ತು ಪ್ರಯಾಣಿಕರ ಮೇಲಿನ ತೆರಿಗೆಗಳು | 3,125 | 0.42 |
| ಸೀಮಾ ಸುಂಕ | 3,830 | 0.52 |
| ಕೇಂದ್ರ ಅಬಕಾರಿ ಸುಂಕ | 3,182 | 0.43 |
| ಸೇವಾ ತೆರಿಗೆ | 4,154 | 0.56 |
| ಸರಕು ಮತ್ತು ಸೇವೆಗಳ ಮೇಲಿನ ಇತರ ತೆರಿಗೆ ಮತ್ತು ಶುಲ್ಕ | 1,224 | 0.17 |
| ವಿದ್ಯುಚ್ಛಕ್ತಿಯ ಮೇಲಿನ ತೆರಿಗೆ ಮತ್ತು ಶುಲ್ಕ | 1,170 | 0.16 |
| * 2015-16 ನೇ ವರ್ಷದ ರಾ.ಒ.ಆಂ.ಉ: ₹735,975 ಕೋಟಿ (ಆಕರ : ಮಧ್ಯಂತರ ವಿತ್ತೀಯ ಯೋಜನೆ 2016-20) | | |

ಪ್ರಸಕ್ತ ಸಾಲಿನಲ್ಲಿ ನಿವ್ವಳ ತೆರಿಗೆ ಸ್ವೀಕೃತಿಗಳು ಆಯವ್ಯಯ ಅಂದಾಜುಗಳಿಗಿಂತಲೂ ₹545 ಕೋಟಿಗಳಷ್ಟು ಹೆಚ್ಚಾಗಿದೆ. ಪ್ರಮುಖ ವ್ಯತ್ಯಾಸಗಳು ಈ ಕೆಳಕಂಡಂತೆ ಇವೆ.

(₹ ಕೋಟಿಗಳಲ್ಲಿ)


| ಆಯವ್ಯಯ ಅಂದಾಜುಗಳಿಗಿಂತ ಕಡಿಮೆ ಇರುವ ವಾಸ್ತವಗಳು | | ಆಯವ್ಯಯ ಅಂದಾಜುಗಳಿಗಿಂತ ಹೆಚ್ಚಳವಿರುವ ವಾಸ್ತವಗಳು | |
|---|---|---|---|
| ನಿಗಮ ತೆರಿಗೆ | 662 | ವಾಹನ ಮೇಲಿನ ತೆರಿಗೆಗಳು | 202 |
| ಸೇವಾ ತೆರಿಗೆ | 76 | ಸರಕು ಮತ್ತು ಪ್ರಯಾಣಿಕರ ಮೇಲಿನ ತೆರಿಗೆಗಳು | 24 |
| ಮುದ್ರಾಂಕ ಮತ್ತು ನೋಂದಣಿ ಶುಲ್ಕ | 15 | ವಿದ್ಯುಚ್ಛಕ್ತಿಯ ಮೇಲಿನ ತೆರಿಗೆ ಮತ್ತು ಶುಲ್ಕ | 19 |
| ವರಮಾನದ ಮತ್ತು ವೆಚ್ಚಗಳ ಮೇಲಿನ ಇತರೆ ತೆರಿಗೆಗಳು | 146 | ರಾಜ್ಯ ಅಬಕಾರಿ | 133 |
| ಭೂಕಂದಾಯ | 40 | ಕೇಂದ್ರ ಅಬಕಾರಿ ಸುಂಕ | 703 |
| ಮಾರಾಟ, ವ್ಯಾಪಾರ ಮುಂತಾದವುಗಳ ಮೇಲಿನ ತೆರಿಗೆಗಳು | 880 | ಸೀಮಾ ಸುಂಕ | 20 |
| ನಿಗಮ ತೆರಿಗೆಯ ಹೊರತು ವರಮಾನದ ಮೇಲಿಣ ತೆರಿಗೆಗಳು | 809 | | |
| ವ್ಯವಸಾಯವರಮಾನದ ಮೇಲಿಣ ತೆರಿಗೆ | 11 | | |
| ಸರಕು ಮತ್ತು ಸೇವೆಗಳ ಮೇಲಿನ ಇತರ ತೆರಿಗೆ ಮತ್ತು ಶುಲ್ಕ | 195 | | |


## 2.3 ರಾಜಸ್ವ ಸ್ವೀಕೃತಿಗಳ ಪ್ರವೃತ್ತಿ

ಕಳೆದ ಐದು ವರ್ಷಗಳ ರಾಜಸ್ವ ಸ್ವೀಕೃತಿಗಳ ವಿಭಾಗಗಳ ಪ್ರವೃತ್ತಿ ಮತ್ತು ರಾ.ಒ.ಆಂ.ಉ.ದ ಒಟ್ಟು ರಾಜಸ್ವ ಸ್ವೀಕೃತಿಗಳ ಶತಾಂಶವನ್ನು ನಕ್ಷೆಯ ಸಹಿತ ಈ ಕೆಳಗೆ ಕೋಷ್ಟಕದಲ್ಲಿ ನೀಡಲಾಗಿದೆ.

(₹ ಕೋಟಿಗಳಲ್ಲಿ)

| ವರ್ಷ | ತೆರಿಗೆ ರಾಜಸ್ವ | ತೆರಿಗೆಯೇತರ ರಾಜಸ್ವ | ಸಹಾಯಾನು ದಾನಗಳು ಮತ್ತು ವಂತಿಗೆಗಳು | ಒಟ್ಟು ರಾಜಸ್ವ ಸ್ವೀಕೃತಿ | ರಾ.ಒ.ಆಂ.ಉ* | ರಾ.ಒ.ಆಂ.ಉ. ದ ಮೇಲಿನ ಒಟ್ಟು ರಾಜಸ್ವ ಸ್ವೀಕೃತಿಗಳ ಶತಾಂಶ |
|---|---|---|---|---|---|---|
| 2011–12 | 57,551 | 4,087 | 8,168 | 69,806 | 434,270 | 16.07 |
| 2012–13 | 66,401 | 3,966 | 7,809 | 78,176 | 520,766 | 15.01 |
| 2013–14 | 76,412 | 4,032 | 9,099 | 89,543 | 601,633 | 14.88 |
| 2014–15 | 84,835 | 4,688 | 14,619 | 104,142 | 685,207 | 15.20 |
| 2015–16 | 99,533 | 5,355 | 13,929 | 118,817 | 735,975 | 16.14 |
| *(ರಾ.ಒ.ಆಂ.ಉ.ದ 2015–16 ಆಕರ : ಮಧ್ಯಂತರ ವಿತ್ತೀಯ ಯೋಜನೆ 2016–20). | | | | | | |







### *2.3.1 ತೆರಿಗೆ ರಾಜಸ್ವದ ಅಂಶಗಳು*

ಕಳೆದ ಐದು ವರ್ಷಗಳ ತೆರಿಗೆ ರಾಜಸ್ವದ ಉಪ-ವಿಭಾಗವಾರು ಪ್ರವೃತ್ತಿಯನ್ನು ಈ ಕೆಳಗೆ ನೀಡಲಾಗಿದೆ.

**(₹ ಕೋಟಿಗಳಲ್ಲಿ)**

| ತೆರಿಗೆ ರಾಜಸ್ವ | 2011-12 | 2012-13 | 2013-14 | 2014-15 | 2015-16 |
|---|---|---|---|---|---|
| ವರಮಾನ ಮತ್ತು ವೆಚ್ಚದ ಮೇಲಿನ ತೆರಿಗೆಗಳು | 7,189 | 7,978 | 8,516 | 9,660 | 13,653 |
| ಆಸ್ತಿ ಮತ್ತು ಬಂಡವಾಳ ವ್ಯವಹಾರಗಳ ಮೇಲಿನ ತೆರಿಗೆಗಳು | 4,855 | 5,438 | 6,401 | 7,225 | 8,397 |
| ಸರಕು ಮತ್ತು ಸೇವೆಗಳ ಮೇಲಿನ ತೆರಿಗೆ | 45,507 | 52,985 | 61,495 | 67,950 | 77,483 |
| **ಒಟ್ಟು ರಾಜಸ್ವ ತೆರಿಗೆ** | **57,551** | **66,401** | **76,412** | **84,835** | **99,533** |



## 2.4 ರಾಜ್ಯದ ತೆರಿಗೆಯ ಸಂಗ್ರಹದ ನಿರ್ವಹಣೆ

| ವರ್ಷ | ರಾಜಸ್ವ ತೆರಿಗೆ | ಕೇಂದ್ರ ತೆರಿಗೆಗಳು ಮತ್ತು ಸುಂಕಗಳಲ್ಲಿ ರಾಜ್ಯ ಪಾಲು | ರಾಜ್ಯದ ಸ್ವಂತ ರಾಜಸ್ವ ತೆರಿಗೆ | ರಾ.ಒ.ಆಂ.ಉ.* | ಕೇಂದ್ರ ತೆರಿಗೆಗಳು ಮತ್ತು ಸುಂಕಗಳಲ್ಲಿ ರಾಜ್ಯ ಪಾಲು ರಾ.ಒ.ಆಂ.ಉ. ಶತಾಂಶ | ರಾಜ್ಯದ ಸ್ವಂತ ತೆರಿಗೆ ರಾಜಸ್ವದ ರಾ.ಒ.ಆಂ.ಉ. ಶತಾಂಶ |
|---|---|---|---|---|---|---|
| | (₹ ಕೋಟಿಗಳಲ್ಲಿ) | | | | | |
| 2011–12 | 57,551 | 11,075 | 46,476 | 434,270 | 2.55 | 10.70 |
| 2012–13 | 66,401 | 12,647 | 53,754 | 520,766 | 2.43 | 10.32 |
| 2013–14 | 76,412 | 13,808 | 62,604 | 601,633 | 2.30 | 10.41 |
| 2014–15 | 84,835 | 14,654 | 70,181 | 685,207 | 2.14 | 10.24 |
| 2015–16 | 99,533 | 23,983 | 75,550 | 735,975 | 3.26 | 10.27 |
| * ರಾ.ಒ.ಆಂ.ಉ. ದ 2015–16 ಆಕರ : ಮಧ್ಯಂತರ ವಿತ್ತೀಯ ಯೋಜನೆ 2016–20. | | | | | | |

## 2.5 ತೆರಿಗೆ ಸಂಗ್ರಹದ ದಕ್ಷತೆ

### *ಎ. ಆಸ್ತಿಗಳ ಮತ್ತು ಬಂಡವಾಳ ವಹಿವಾಟಿನ ಮೇಲಿನ ತೆರಿಗೆಗಳು(*)*

ತೆರಿಗೆ ಸಂಗ್ರಹದ ಶೇಕಡಾವಾರು ಶುಲ್ಕಕ್ಕೆ ಅನುಗುಣವಾಗಿ ರಾಜಸ್ವಸಂಗ್ರಹದ ದಕ್ಷತೆಯನ್ನು ಈ ಕೆಳಗೆ ನೀಡಲಾಗಿದೆ.

(₹ ಕೋಟಿಗಳಲ್ಲಿ)

| ವಿವರ | 2011–12 | 2012–13 | 2013–14 | 2014–15 | 2015–16 |
|---|---|---|---|---|---|
| ರಾಜಸ್ವ ಸಂಗ್ರಹ | 4,859 | 5,494 | 6,441 | 7,221 | 8,423 |
| ಸಂಗ್ರಹದ ಮೇಲಿನ ವೆಚ್ಚ (ಎ) | 254 | 312 | 362 | 360 | 420 |
| ತೆರಿಗೆ ಸಂಗ್ರಹದ ಶೇಕಡಾವಾರು ಶುಲ್ಕ | 5.23 | 5.68 | 5.62 | 4.99 | 4.99 |
| (*)ಆಸ್ತಿಯ ಮೇಲಿನ ತೆರಿಗೆಯು ರಾಜ್ಯದ ತೆರಿಗೆಯ ಭಾಗವಲ್ಲವಾದ್ದರಿಂದ ಆಸ್ತಿಗಳ ಮತ್ತು ಬಂಡವಾಳ ವಹಿವಾಟಿನ ಮೇಲಿನ ತೆರಿಗೆಗಳಲ್ಲಿ ಇವುಗಳನ್ನು ಹೊರತುಪಡಿಸಿದೆ'. | | | | | |
| (ಎ) ಒಳಶೀರ್ಷಿಕೆ '001- ನಿರ್ದೇಶನ ಮತ್ತು ಆಡಳಿತ' ಹಾಗೂ '101-ಸಂಗ್ರಹಣಾ ಶುಲ್ಕ' ಇದರಡಿಯಲ್ಲಿ ವೆಚ್ಚವಾದ ಮೊತ್ತಗಳನ್ನೊಳಗೊಂಡಿದೆ. | | | | | |

### *ಬಿ. ವಸ್ತು ಮತ್ತು ಸೇವಾ ತೆರಿಗೆ (*)*

(₹ ಕೋಟಿಗಳಲ್ಲಿ)

| ವಿವರ | 2011–12 | 2012–13 | 2013–14 | 2014–15 | 2015–16 |
|---|---|---|---|---|---|
| ರಾಜಸ್ವ ಸಂಗ್ರಹ | 41,192 | 49,054 | 56,787 | 63,497 | 67,753 |
| ಸಂಗ್ರಹದ ಮೇಲಿನ ವೆಚ್ಚ (ಎ) | 344 | 454 | 1,457 | 1,697 | 488 |
| ತೆರಿಗೆ ಸಂಗ್ರಹದ ಶೇಕಡಾವಾರು ವೆಚ್ಚ | 0.84 | 0.93 | 2.57 | 2.67 | 0.72 |
| (*) 'ಸೀಮಾ ಶುಲ್ಕ, ಕೇಂದ್ರ ಅಬಕಾರಿ ಶುಲ್ಕ, ಸೇವಾ ತೆರಿಗೆ – ಇವುಗಳನ್ನು ಹೊರತುಪಡಿಸಿದೆ'. | | | | | |
| (A) ಒಳಶೀರ್ಷಿಕೆ '001- ನಿರ್ದೇಶನ ಮತ್ತು ಆಡಳಿತ' ಹಾಗೂ '101-ಸಂಗ್ರಹಣಾ ಶುಲ್ಕ' ಇದರಡಿಯಲ್ಲಿ ವೆಚ್ಚವಾದ ಮೊತ್ತಗಳನ್ನೊಳಗೊಂಡಿದೆ. | | | | | |

## 2.6 ಕೇಂದ್ರ ತೆರಿಗೆ ಮತ್ತು ಸುಂಕಗಳಲ್ಲಿ ರಾಜ್ಯ ಪಾಲಿನ ಪ್ರವೃತ್ತಿ

(₹ ಕೋಟಿಗಳಲ್ಲಿ)

| ಪ್ರಧಾನ ಶೀರ್ಷಿಕೆ ವಿವರ | 2011-12 | 2012-13 | 2013-14 | 2014-15 | 2015-16 |
|---|---|---|---|---|---|
| ನಿಗಮ ತೆರಿಗೆ | 4,359 | 4,543 | 4,644 | 5,117 | 7,548 |
| ನಿಗಮ ತೆರಿಗೆ ಹೊರತಾದ ವರಮಾನದ ಮೇಲಿನ ತೆರಿಗೆ | 2,214 | 2,720 | 3,058 | 3,654 | 5,252 |
| ಸಂಪತ್ತು ತೆರಿಗೆ | 17 | 8 | 13 | 14 | 2 |
| ಸೀಮಾ ಸುಂಕ | 1,920 | 2,102 | 2,253 | 2,370 | 3,830 |
| ಕೇಂದ್ರ ಅಬಕಾರಿ ಸುಂಕ | 1,243 | 1,428 | 1,591 | 1,338 | 3,182 |
| ಸೇವಾ ತೆರಿಗೆ | 1,322 | 1,847 | 2,250 | 2,161 | 4,153 |
| ಸರಕುಗಳ ಮತ್ತು ಸೇವೆಗಳ ಮೇಲಿನ ಸುಂಕ ಮತ್ತು ಇತರ ತೆರಿಗೆಗಳು | * | * | * | * | 16 |
| **ರಾಜ್ಯ ಪಾಲಿನ ಕೇಂದ್ರ ತೆರಿಗೆ ಮತ್ತು ಸುಂಕಗಳು** | **11,075** | **12,647** | **13,808** | **14,654** | **23,983** |
| **ಒಟ್ಟು ರಾಜಸ್ವ ತೆರಿಗೆ** | **57,551** | **66,401** | **76,412** | **84,835** | **99,533** |
| **ಒಟ್ಟು ರಾಜಸ್ವ ತೆರಿಗೆಗೆ ಕೇಂದ್ರ ತೆರಿಗೆ ಮತ್ತು ಸುಂಕಗಳ ಶತಾಂಶ** | **19.24** | **19.05** | **18.07** | **17.27** | **24.10** |


* ಒಂದು ಕೋಟಿಗಿಂತಲೂ ಕಡಿಮೆ ಮೊತ್ತಗಳನ್ನು ಮತ್ತು ಋಣಾತ್ಮಕ ಅಂಕಿಯಾಗಿ {(–)₹ 0.01 ಕೋಟಿ–0045–901 ಶೀರ್ಷಿಕೆಯಡಿಯಲ್ಲಿ} ಸ್ವೀಕೃತಿಯಾದ ಮೊತ್ತಕ್ಕಿಂತ ಸಂಗ್ರಹದ ವೆಚ್ಚ ಅಧಿಕವಾಗಿರುವುದರಿಂದ ಮೊತ್ತಗಳನ್ನು ಭಾರತ ಸರ್ಕಾರದ ವಿತ್ತ ಸಚಿವಾಲಯದ ಮಂಜೂರಾತಿ ಆದೇಶದಲ್ಲಿ ಸೂಚಿಸಿರುವಂತೆ ತೋರಿಸುತ್ತದೆ.

## 2.7 ಸಹಾಯಾನುದಾನ ಮತ್ತು ವಂತಿಗೆಗಳು

ಸಹಾಯಾನುದಾನ ಮತ್ತು ವಂತಿಗೆಗಳು ಕೇಂದ್ರ ಸರ್ಕಾರದಿಂದ ಬಂದ ಸಹಾಯವನ್ನು ಸೂಚಿಸುತ್ತದೆ ಮತ್ತು ಇದು ಯೋಜನಾ ಆಯೋಗ ಅನುಮೋದಿಸಿದ ರಾಜ್ಯ ಯೋಜನಾ ಕಾರ್ಯಕ್ರಮಗಳು, ಕೇಂದ್ರ ಯೋಜನೆಗಳು, ಕೇಂದ್ರ ಪುರಸ್ಕೃತ ಯೋಜನೆಗಳನ್ನು ಮತ್ತು ಹಣಕಾಸು ಆಯೋಗ ಶಿಫಾರಸ್ಸು ಮಾಡಿದ ರಾಜ್ಯ ಯೋಜನೇತರ ಕಾರ್ಯಕ್ರಮಗಳನ್ನು ಒಳಗೊಂಡಿದೆ. ಕಳೆದ ಐದು ವರ್ಷಗಳಲ್ಲಿ ಸಹಾಯಾನುದಾನ ಮತ್ತು ವಂತಿಗೆಯಡಿಯಲ್ಲಿನ ಒಟ್ಟು ಸ್ವೀಕೃತಿಗಳ ವಿವರಗಳನ್ನು ಕೆಳಗೆ ನೀಡಲಾಗಿದೆ.

(₹ ಕೋಟಿಗಳಲ್ಲಿ)

| ಸಹಾಯಾನುದಾನ ಮತ್ತು ವಂತಿಗೆಗಳ ಭಾಗಗಳು | 2011-12 | 2012-13 | 2013-14 | 2014-15 | 2015-16 |
|---|---|---|---|---|---|
| ಯೋಜನೇತರ ಅನುದಾನಗಳು | 2,129 | 2,455 | 3,140 | 3,635 | 5,548 |
| ರಾಜ್ಯ ಯೋಜನೆಗಳಿಗೆ ಅನುದಾನಗಳು | 3,626 | 2,909 | 3,341 | 9,097 | 8,105 |
| ಕೇಂದ್ರ ಯೋಜನೆಗಳಿಗೆ ಅನುದಾನಗಳು | 76 | 124 | 192 | 158 | 139 |
| ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಅನುದಾನಗಳು | 2,337 | 2,321 | 2,426 | 1,729 | 137 |
| **ಒಟ್ಟು** | **8,168** | **7,809** | **9,099** | **14,619** | **13,929** |




ಒಟ್ಟು ಸಹಾಯಾನುದಾನ ಮತ್ತು ವಂತಿಗೆಗಳಲ್ಲಿ ಯೋಜನೇತರ ಅನುದಾನದ ಪಾಲು 2014–15 ರಲ್ಲಿದ್ದ ಶೇಕಡ 24.86 ರಿಂದ 2015–16ರಲ್ಲಿ ಶೇಕಡ 39.83ಕ್ಕೆ ಏರಿದ್ದರೆ ಕೇಂದ್ರ ಸರ್ಕಾರವು ಯೋಜನಾ ಕಾರ್ಯಕ್ರಮದ ಪುನರ್ರಚನೆ ಮತ್ತು ರಾಜ್ಯ ಆಯವ್ಯಯದ ಮೂಲಕ ಹಣ ಬಿಡುಗಡೆ ಮಾಡಿದ ಕಾರಣದಿಂದ ರಾಜ್ಯ ಯೋಜನಾ ಕಾರ್ಯಕ್ರಮಗಳ ಅನುದಾನದ ಪಾಲು 2014–15ರಲ್ಲಿದ್ದ ಶೇಕಡ 62.23ರಿಂದ, 2015–16ರಲ್ಲಿ 58.19ಕ್ಕೆ ಇಳಿದಿದೆ. ಯೋಜನಾ ಕಾರ್ಯಕ್ರಮಗಳಿಗೆ ಕೇಂದ್ರದ ಪಾಲು ಆಯವ್ಯಯದ ಅಂದಾಜಿನ ₹796 ಕೋಟಿಗಳಿಗೆ ಪ್ರತಿಯಾಗಿ, ವಾಸ್ತವವಾಗಿ ₹276 ಕೋಟಿಗಳ ಅನುದಾನವನ್ನು ಪಡೆಯಲಾಗಿದೆ ಹಾಗೂ ಇದು ಆಯವ್ಯಯ ಅಂದಾಜಿನ ಶೇಕಡ 34.67ರಷ್ಟು ಇತ್ತು.

## 2.8 ಸಾರ್ವಜನಿಕ ಋಣ

ಕಳೆದ ಐದು ವರ್ಷಗಳಲ್ಲಿ ಸಾರ್ವಜನಿಕ ಋಣದಡಿ ಸ್ವೀಕೃತಿಗಳ ಪ್ರವೃತ್ತಿಯನ್ನು ಕೆಳಗೆ ಸೂಚಿಸಲಾಗಿದೆ.

(₹ ಕೋಟಿಗಳಲ್ಲಿ)

| ವಿವರ | 2011–12 | 2012–13 | 2013–14 | 2014–15 | 2015–16 |
|---|---|---|---|---|---|
| ರಾಜ್ಯಸರ್ಕಾರದ ಆಂತರಿಕ ಋಣ | 8,091 | 12,116 | 16,132 | 20,510 | 19,801 |
| ಕೇಂದ್ರ ಸರ್ಕಾರದಿಂದ ಪಡೆದ ಸಾಲ ಮತ್ತು ಮುಂಗಡಗಳು | 1,267 | 1,349 | 1,155 | 1,365 | 1,271 |
| **ಒಟ್ಟು ಸಾರ್ವಜನಿಕ ಋಣ** | **9,358** | **13,465** | **17,287** | **21,875** | **21,072** |

ಪ್ರಸಕ್ತ 2015–16 ಸಾಲಿನಲ್ಲಿ ಸರ್ಕಾರವು 2025–26ರಲ್ಲಿ ವಿಮೋಚನೆಗೊಳ್ಳುವ ₹16,187 ಕೋಟಿಗಳಷ್ಟು ಮೊತ್ತದ ಎಂಟು ಮಾರುಕಟ್ಟೆ ಸಾಲಗಳನ್ನು ಪಡೆದಿದೆ. ಪ್ರಸಕ್ತ ಸಾಲಿನಲ್ಲಿ ಸಾರ್ವಜನಿಕ ಋಣದ ಒಟ್ಟು ಸ್ವೀಕೃತಿ ₹21,072 ಕೋಟಿಯಲ್ಲಿ ರಾಜ್ಯ ಸರ್ಕಾರದ ಆಂತರಿಕ ಋಣ (₹19,801 ಕೋಟಿ) ಮತ್ತು ಈ ಅವಧಿಯಲ್ಲಿ ಪಡೆದ ಕೇಂದ್ರ ಸಾಲದ (₹1,271 ಕೋಟಿ) ಭಾಗಕ್ಕೆ ಪ್ರತಿಯಾಗಿ, ₹4,110 ಕೋಟಿ ಮೊತ್ತದ ಸಾರ್ವಜನಿಕ ಋಣದ ಮರುಪಾವತಿಯನ್ನು ಹೊರತುಪಡಿಸಿ ಬಂಡವಾಳ ವೆಚ್ಚವು ₹21,369 ಕೋಟಿಯಷ್ಟಿತ್ತು.

# ಅಧ್ಯಾಯ–III

## ವೆಚ್ಚಗಳು

### 3.1 ಪೀಠಿಕೆ

ವೆಚ್ಚಗಳನ್ನು ರಾಜಸ್ವ ವೆಚ್ಚ ಮತ್ತು ಬಂಡವಾಳ ವೆಚ್ಚ ಎಂದು ವರ್ಗೀಕರಿಸಲಾಗಿದೆ. ರಾಜಸ್ವ ವೆಚ್ಚವನ್ನು ರಾಜ್ಯ ಸರ್ಕಾರದ ಇಲಾಖೆಗಳ ದಿನನಿತ್ಯದ ಖರ್ಚಿನ ನಿರ್ವಹಣೆಗೆ ಬಳಸಲಾಗುತ್ತದೆ. ಬಂಡವಾಳ ವೆಚ್ಚವನ್ನು ಶಾಶ್ವತ ಆಸ್ತಿ ನಿರ್ಮಾಣ ಅಥವಾ ಅಂತಹ ಆಸ್ತಿಗಳ ಬಳಕೆಯನ್ನು ಹೆಚ್ಚಿಸಲು ಅಥವಾ ಶಾಶ್ವತ ಜವಾಬ್ದಾರಿಗಳನ್ನು ಕಡಿಮೆಯಾಗಿಸಲು ಬಳಸಲಾಗುತ್ತದೆ. ವೆಚ್ಚವನ್ನು ಯೋಜನೆ ಮತ್ತು ಯೋಜನೇತರ ಎಂದೂ ವರ್ಗೀಕರಿಸಲಾಗಿದೆ.

| | |
|---|---|
| **ಸಾಮಾನ್ಯ ಸೇವೆಗಳು** | ನ್ಯಾಯಾಂಗ, ಪೋಲೀಸ್, ಬಂದೀಖಾನೆ, ಲೋಕೋಪಯೋಗಿ, ನಿವೃತ್ತಿ ವೇತನ ಮುಂತಾದವುಗಳನ್ನು ಒಳಗೊಂಡಿದೆ. |
| **ಸಾಮಾಜಿಕ ಸೇವೆಗಳು** | ಶಿಕ್ಷಣ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ನೀರು ಸರಬರಾಜು ಮತ್ತು ನೈರ್ಮಲ್ಯ, ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ, ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಮುಂತಾದವುಗಳನ್ನು ಒಳಗೊಂಡಿದೆ. |
| **ಆರ್ಥಿಕ ಸೇವೆಗಳು,** | ಕೃಷಿ, ಗ್ರಾಮೀಣ ಅಭಿವೃದ್ಧಿ, ನೀರಾವರಿ, ಸಹಕಾರ, ಇಂಧನ, ಕೈಗಾರಿಕೆಗಳು, ಸಾರಿಗೆ ಮುಂತಾದವುಗಳನ್ನು ಒಳಗೊಂಡಿದೆ. |

### 3.2 ರಾಜಸ್ವ ವೆಚ್ಚ

2015–16ನೇ ಸಾಲಿನ ₹117,029 ಕೋಟಿಗಳ ರಾಜಸ್ವ ವೆಚ್ಚವು ಆಯವ್ಯಯ ಅಂದಾಜಿಗಿಂತಲೂ (₹115,449 ಕೋಟಿ) ₹1,580 ಕೋಟಿಗಳಷ್ಟು ಕಡಿಮೆಯಾಗಿದೆ. ಕಳೆದ ಐದು ವರ್ಷಗಳಲ್ಲಿ ಆಯವ್ಯಯ ಅಂದಾಜಿಗೆ ಪ್ರತಿಯಾಗಿ ರಾಜಸ್ವ ವೆಚ್ಚದ ಪ್ರವೃತ್ತಿಯನ್ನು ಕೆಳಗೆ ನೀಡಲಾಗಿದೆ.

**(₹ ಕೋಟಿಗಳಲ್ಲಿ)**

| ವಿವರ | 2011–12 | 2012–13 | 2013–14 | 2014–15 | 2015–16 |
|---|---|---|---|---|---|
| ಆಯವ್ಯಯ ಅಂದಾಜುಗಳು | 65,034 | 80,530 | 97,391 | 110,757 | 115,449 |
| ವಾಸ್ತವ ವೆಚ್ಚ | 65,115 | 76,293 | 89,190 | 103,614 | 117,029 |
| ಅಂತರ | (–) 81 | 4,237 | 8,201 | 7,143 | (–) 1,580 |
| ಆಯವ್ಯಯದ ಅಂತರಕ್ಕೆ ಶೇಕಡಾವಾರು | (–) 1 | 5 | 8 | 6 | 1 |

### 3.2.1 ರಾಜಸ್ವ ವೆಚ್ಚದ ವಿಭಾಗವಾರು ಹಂಚಿಕೆ

ವಿಭಾಗ ಮತ್ತು ಉಪವಿಭಾಗಗಳ ನಡುವೆ ರಾಜಸ್ವ ವೆಚ್ಚದ ಹಂಚಿಕೆಯನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ

(₹ ಕೋಟಿಗಳಲ್ಲಿ)


| ರಾಜಸ್ವ ವೆಚ್ಚದ ಅಂಶಗಳು | | ಮೊತ್ತ | ಶೇಕಡಾವಾರು |
|---|---|---|---|
| **A.** | **ಸಾಮಾನ್ಯ ಸೇವೆಗಳು** (*) | **30,800** | **26.32** |
| a. | ರಾಜ್ಯದ ಅಂಗಗಳು | 945 | 0.81 |
| b. | ವಿತ್ತೀಯ ಸೇವೆಗಳು { (i) ರಿಂದ (iv) ರವರೆಗಿನ ಮೊತ್ತ} | 961 | 0.82 |
| (i) | ವರಮಾನ ಮತ್ತು ಖರ್ಚುಗಳ ಮೇಲಿನ ತೆರಿಗೆಗಳ ಸಂಗ್ರಹ | 6 | ... |
| (ii) | ಆಸ್ತಿ ಮತ್ತು ಬಂಡವಾಳ ವಹಿವಾಟಿನ ಮೇಲಿನ ತೆರಿಗೆ ಸಂಗ್ರಹ | 437 | 0.37 |
| (iii) | ಸರಕುಗಳ ಮತ್ತು ಸೇವೆಗಳ ಮೇಲಿನ ತೆರಿಗೆ ಸಂಗ್ರಹ | 511 | 0.44 |
| (iv) | ಇತರ ವಿತ್ತೀಯ ಸೇವೆಗಳು | 7 | 0.01 |
| c. | ಬಡ್ಡಿ ಪಾವತಿ ಮತ್ತು ಋಣ ಸೇವೆ (&) | 11,816 | 10.10 |
| d. | ಆಡಳಿತ ಸೇವೆಗಳು | 5,711 | 4.88 |
| e. | ನಿವೃತ್ತಿ ವೇತನ ಮತ್ತು ಇತರ ಸಾಮಾನ್ಯ ಸೇವೆಗಳು | 11,367 | 9.71 |
| **B.** | **ಸಾಮಾಜಿಕ ಸೇವೆಗಳು** | **46,307** | **39.57** |
| **C.** | **ಆರ್ಥಿಕ ಸೇವೆಗಳು** | **33,846** | **28.92** |
| **D.** | **ಸಹಾಯಾನುದಾನ ಮತ್ತು ವಂತಿಗೆಗಳು** | **6,076** | **5.19** |
| | **ಒಟ್ಟು ವೆಚ್ಚ (ರಾಜಸ್ವ ಲೆಕ್ಕ)** | **117,029** | **100.00** |
| (*) | ರಾಜಸ್ವ ವೆಚ್ಚದ ವಿಭಾಗ ಮತ್ತು ಉಪವಿಭಾಗಗಳ ಶತಾಂಶವು ಒಟ್ಟು ರಾಜಸ್ವ ವೆಚ್ಚಕ್ಕೆ ಸಂಬಂಧಿಸಿದೆ. | | |
| (&) | 'ಸಾಮಾನ್ಯ ಸೇವೆ', 'ಸಾಮಾಜಿಕ ಸೇವೆ' ಮತ್ತು 'ಆರ್ಥಿಕ ಸೇವೆ' ಉಪವಿಭಾಗಗಳಡಿಯಲ್ಲಿ ಸೇರಿರುವ ಕಾರ್ಯಿಕ ಪ್ರಧಾನ ಶೀರ್ಷಿಕೆಯಡಿಯಲ್ಲಿ ಲೆಕ್ಕ ಮಾಡಿರುವ ಆಯವ್ಯಯದ ಹೊರಗಿನ ಸಾಲಗಳ ಮೇಲಿನ ಬಡ್ಡಿ (₹597 ಕೋಟಿಗಳು) ಪಾವತಿಯನ್ನು ಹೊರತುಪಡಿಸಿದೆ. | | |

### 3.2.2 ವಿಭಾಗವಾರು ರಾಜಸ್ವ ವೆಚ್ಚದ ಸಂಯೋಜನೆಯ ಪ್ರವೃತ್ತಿ

(₹ ಕೋಟಿಗಳಲ್ಲಿ)

| ವರ್ಷ | ಸಾಮಾನ್ಯ ಸೇವೆಗಳು | ಸಾಮಾಜಿಕ ಸೇವೆಗಳು | ಆರ್ಥಿಕ ಸೇವೆಗಳು | ಸಹಾಯಾನು-ದಾನದ ಮತ್ತು ವಂತಿಗೆಗಳು | ಒಟ್ಟು ರಾಜಸ್ವ ವೆಚ್ಚಗಳು | ರಾ.ಒ.ಆಂ. ಉ*. | ರಾ.ಒ.ಆಂ.ಉ*. ಕ್ಕೆ ಒಟ್ಟು ರಾಜಸ್ವ ವೆಚ್ಚದ ಶತಾಂಶ |
|---|---|---|---|---|---|---|---|
| 2011–12 | 16,445 | 25,172 | 19,154 | 4,344 | 65,115 | 434,270 | 14.99 |
| 2012–13 | 20,181 | 30,420 | 21,674 | 4,018 | 76,293 | 520,766 | 14.65 |
| 2013–14 | 24,954 | 32,622 | 26,593 | 5,021 | 89,190 | 601,633 | 14.82 |
| 2014–15 | 28,266 | 39,366 | 29,971 | 6,011 | 103,614 | 685,207 | 15.12 |
| 2015–16 | 30,800 | 46,307 | 33,846 | 6,076 | 117,029 | 735,975 | 15.90 |

*ರಾ.ಒ.ಆಂ.ಉ.ದ ಆಕರ : ಮಧ್ಯಂತರ ವಿತ್ತೀಯ ಯೋಜನೆ 2016-20.



(*)ಸಾಮಾನ್ಯ ಸೇವೆಗಳಲ್ಲಿ ಪ್ರಧಾನ ಶೀರ್ಷಿಕೆ 2049 ಬಡ್ಡಿ ಪಾವತಿಯೂ ಸೇರಿದೆ

### *3.2.3 ಪ್ರಮುಖ ಉಪವಿಭಾಗಗಳ ವೆಚ್ಚಗಳು*

ಕಳೆದ ಐದು ವರ್ಷಗಳಲ್ಲಿ ಪ್ರಮುಖ ಉಪವಿಭಾಗಗಳ ವೆಚ್ಚದ ಪ್ರವೃತ್ತಿಯನ್ನು ಕೆಳಗೆ ನೀಡಲಾಗಿದೆ

**(₹ ಕೋಟಿಗಳಲ್ಲಿ)**

| ವೆಚ್ಚದ ವಿಭಾಗಗಳು | 2011–12 | 2012–13 | 2013–14 | 2014–15 | 2015–16 |
|---|---|---|---|---|---|
| ಶಿಕ್ಷಣ, ಕ್ರೀಡೆ, ಕಲೆ ಮತ್ತು ಸಂಸ್ಕೃತಿ | 12,240 | 14,624 | 16,166 | 18,063 | 18,724 |
| ಕೃಷಿ ಮತ್ತು ಸಂಬಂಧಿಸಿದ ಚಟುವಟಿಕೆಗಳು | 5,501 | 7,417 | 12,590 | 10,563 | 11,149 |
| ನಿವೃತ್ತಿ ವೇತನ ಮತ್ತು ಇತರ ಸಾಮಾನ್ಯ ಸೇವೆಗಳು | 5,468 | 7,292 | 9,217 | 10,144 | 11,366 |
| ಬಡ್ಡಿ ಪಾವತಿ ಮತ್ತು ಋಣ ಸೇವೆಗಳು | 6,604 | 6,833 | 7,837 | 9,804(A) | 12,413(B) |
| ಇಂಧನ | 5,326 | 7,070 | 5,996 | 6,746 | 9,170 |
| ಸಾಮಾಜಿಕ ಕಲ್ಯಾಣ ಮತ್ತು ಪೌಷ್ಟಿಕತೆ | 4,559 | 5,542 | 5,388 | 6,597 | 8,793 |
| ಆಡಳಿತ ಸೇವೆಗಳು | 3,622 | 4,456 | 5,030 | 5,506 | 5,711 |
| ಆರೋಗ್ಯ ಮತ್ತು ಕುಟುಂಬ ಕಲ್ಯಾಣ | 2,958 | 3,568 | 4,093 | 5,058 | 5,010 |
| ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ, ಇತರ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ | 2,940 | 3,581 | 3,720 | 5,038 | 5,562 |
| ಗ್ರಾಮೀಣ ಅಭಿವೃದ್ಧಿ | 1,949 | 2,378 | 2,283 | 4,988 | 5,222 |
| ನೀರು ಸರಬರಾಜು, ನೈರ್ಮಲ್ಯ, ವಸತಿ ಮತ್ತು ನಗರಾಭಿವೃದ್ಧಿ | 1,873 | 2,360 | 2,670 | 3,944 | 7,374 |
| ಸಾರಿಗೆ | 1,695 | 2,024 | 2,560 | 3,232 | 3,552 |
| ಸಾಮಾನ್ಯ ಆರ್ಥಿಕ ಸೇವೆಗಳು | 3,150 | 1,151 | 1,337 | 2,258 | 1,630 |

(A) 'ಸಾಮಾನ್ಯ ಸೇವೆ', 'ಸಾಮಾಜಿಕ ಸೇವೆ' ಮತ್ತು 'ಆರ್ಥಿಕ ಸೇವೆ' ಉಪವಿಭಾಗಗಳಡಿಯಲ್ಲಿ ಸೇರಿರುವ ಕಾರ್ಯಿಕ ಪ್ರಧಾನ ಶೀರ್ಷಿಕೆಯಡಿಯಲ್ಲಿ ಲೆಕ್ಕ ಮಾಡಿರುವ ಆಯವ್ಯಯದ ಹೊರಗಿನ ಸಾಲಗಳ ಮೇಲಿನ ಬಡ್ಡಿ (₹399.53 ಕೋಟಿಗಳು) ಪಾವತಿ ಒಳಗೊಂಡಿರುತ್ತದೆ.

(B) 'ಸಾಮಾನ್ಯ ಸೇವೆ', 'ಸಾಮಾಜಿಕ ಸೇವೆ' ಮತ್ತು 'ಆರ್ಥಿಕ ಸೇವೆ' ಉಪವಿಭಾಗಗಳಡಿಯಲ್ಲಿ ಸೇರಿರುವ ಕಾರ್ಯಿಕ ಪ್ರಧಾನ ಶೀರ್ಷಿಕೆಯಡಿಯಲ್ಲಿ ಲೆಕ್ಕ ಮಾಡಿರುವ ಆಯವ್ಯಯದ ಹೊರಗಿನ ಸಾಲಗಳ ಮೇಲಿನ ಬಡ್ಡಿ (₹597 ಕೋಟಿಗಳು) ಪಾವತಿ ಒಳಗೊಂಡಿರುತ್ತದೆ.

## 3.3 ಬಂಡವಾಳ ವೆಚ್ಚ

2015–16ರಲ್ಲಿ ಸರ್ಕಾರವು ₹21,369 ಕೋಟಿ ಬಂಡವಾಳ ವೆಚ್ಚದಲ್ಲಿ ಸಾಲ ಮತ್ತು ಮುಂಗಡಗಳ ವಿತರಣೆ (₹656 ಕೋಟಿ) ಸೇರಿದ್ದು ರಾ.ಒ.ಆಂ.ಉ.ದ ಶೇಕಡ 2.90 ರಷ್ಟಿದೆ. ಬಂಡವಾಳ ವೆಚ್ಚಗಳು ಆಯವ್ಯಯ ಅಂದಾಜಿಗಿಂತ (₹21,297 ಕೋಟಿ) ₹72 ಕೋಟಿಗಳಷ್ಟು ಹೆಚ್ಚಾಗಿದೆ. ಈ ಹೆಚ್ಚಳವು ಯೋಜನೇತರ ವೆಚ್ಚದಲ್ಲಿ ₹ 119 ಕೋಟಿ ಕಡಿಮೆ ವಿತರಣೆಯು ಹಾಗೂ ಯೋಜನಾ ವೆಚ್ಚದಲ್ಲಿ ಹೆಚ್ಚುವರಿ ₹191 ಕೋಟಿಗಳು ಕಾರಣವಾಗಿದೆ.

### *3.3.1 ಬಂಡವಾಳ ವೆಚ್ಚದ ವಿಭಾಗವಾರು ವಿತರಣೆ*

2015–16 ರಲ್ಲಿ ಸರ್ಕಾರವು ಕೆಳಗಿನ ವಿಭಾಗಗಳಲ್ಲಿ ವಿವಿಧ ಯೋಜನೆಗಳ ಮೇಲೆ ₹21,369 ಕೋಟಿಗಳನ್ನು ವೆಚ್ಚಮಾಡಿದೆ. ಒಟ್ಟು ಬಂಡವಾಳ ವೆಚ್ಚದಲ್ಲಿ ವಿಭಾಗವಾರು ವೆಚ್ಚದ ಶತಾಂಶವನ್ನು ಕೆಳಗೆ ನೀಡಲಾಗಿದೆ.

(₹ ಕೋಟಿಗಳಲ್ಲಿ)


| ಕ್ರ.ಸಂ | ವಿಭಾಗ | ಬಂಡವಾಳ ವೆಚ್ಚ | ಸಾಲ ವಿತರಣೆ | ಒಟ್ಟು ಮೊತ್ತ | ಶತಾಂಶ |
|---|---|---|---|---|---|
| 1. | **ಸಾಮಾನ್ಯ ಸೇವೆಗಳು:** ಪೋಲಿಸ್, ಭೂಕಂದಾಯ ಇತ್ಯಾದಿ. | 991 | ... | 991 | 4.64 |
| 2. | **ಸಾಮಾಜಿಕ ಸೇವೆಗಳು:** ಶಿಕ್ಷಣ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ನೀರು ಸರಬರಾಜು, ಪ.ಜಾ/ಪ.ವ ಕಲ್ಯಾಣ ಇತ್ಯಾದಿ. | 5,314 | 327 | 5,641 | 26.40 |
| 3. | **ಆರ್ಥಿಕ ಸೇವೆಗಳು:** ಕೃಷಿ, ಗ್ರಾಮೀಣ ಅಭಿವೃದ್ಧಿ, ನೀರಾವರಿ, ಸಹಕಾರ, ಇಂಧನ, ಕೈಗಾರಿಕೆ, ಸಾರಿಗೆ ಇತ್ಯಾದಿ. | 14,408 | 239 | 14,647 | 68.54 |
| 4. | ಇತರೆ | ... | 90 | 90 | 0.42 |
| | **ಒಟ್ಟು ಬಂಡವಾಳ ವೆಚ್ಚ (ರಾಜಸ್ವ ಲೆಕ್ಕದ ಹೊರಗೆ)** | **20,713** | **656** | **21,369** | **100.00** |

### *3.3.2 ಬಂಡವಾಳ ವೆಚ್ಚದ ಪ್ರವೃತ್ತಿ*

ಕಳೆದ ಐದು ವರ್ಷಗಳಲ್ಲಿ ಬಂಡವಾಳ ಲೆಕ್ಕದಲ್ಲಿ ಆದ ವೆಚ್ಚದ ಪ್ರವೃತ್ತಿಯನ್ನು ಈ ಕೆಳಗಿನ ಕೋಷ್ಟಕದಲ್ಲಿ ನಕ್ಷೆಯೊಂದಿಗೆ ನೀಡಲಾಗಿದೆ.

(₹ ಕೋಟಿಗಳಲ್ಲಿ)

| ಕ್ರ.ಸಂ | ವಿಭಾಗ | 2011–12 | 2012–13 | 2013–14 | 2014–15 | 2015–16 |
|---|---|---|---|---|---|---|
| 1. | **ಸಾಮಾನ್ಯ ಸೇವೆಗಳು** | 626 | 590 | 501 | 618 | 991 |
| 2. | **ಸಾಮಾಜಿಕ ಸೇವೆಗಳು** | 2,695 | 2,916 | 3,053 | 4,181 | 5,314 |
| 3. | **ಆರ್ಥಿಕ ಸೇವೆಗಳು** | 12,185 | 11,973 | 13,393 | 14,823 | 14,408 |
| 4. | **ಸಾಲ ಮತ್ತು ಮುಂಗಡಗಳು** | 1,815 | 1,102 | 695 | 576 | 656 |
| | **ಒಟ್ಟು** | **17,321** | **16,581** | **17,642** | **20,198** | **21,369** |





~~~~~~
~~~~~~

# ಅಧ್ಯಾಯ– *IV*

## ಯೋಜನೆ ಮತ್ತು ಯೋಜನೇತರ ವೆಚ್ಚ

### 4.1 ವೆಚ್ಚದ ಹಂಚಿಕೆ

2015–16 ರಲ್ಲಿ ಯೋಜನೆ ಮತ್ತು ಯೋಜನೇತರ ವೆಚ್ಚದಡಿ ₹138,398 ಕೋಟಿಗಳನ್ನು ಖರ್ಚುಮಾಡಿದ್ದು ಇದು ರಾ.ಒ.ಆಂ.ಉ.ದ ಶೇಕಡಾ 18.80 ರಷ್ಟಿದೆ. ಕೆಳಗಿನ ಪೈ ನಕ್ಷೆಯಲ್ಲಿ ಯೋಜನೆ ಮತ್ತು ಯೋಜನೇತರ ವೆಚ್ಚದ ಹಂಚಿಕೆಯನ್ನು ಒಟ್ಟು ವೆಚ್ಚದಲ್ಲಿನ ಶತಾಂಶವಾಗಿ ಸೂಚಿಸಲಾಗಿದೆ.





### 4.2 ಯೋಜನಾ ವೆಚ್ಚ

2015–16 ರಲ್ಲಿ ಸರ್ಕಾರವು ಯೋಜನಾ ಕಾರ್ಯಕ್ರಮಗಳಿಗೆ ₹60,884 ಕೋಟಿಗಳನ್ನು ವೆಚ್ಚಮಾಡಿದ್ದು, ಇದು ಒಟ್ಟು ಬಟವಾಡೆಯ ಶೇಕಡಾ 44 ರಷ್ಟಿದೆ. ಈ ವೆಚ್ಚವು ಕೇಂದ್ರ ಪುರಸ್ಕೃತ ಯೋಜನೆಯಲ್ಲಿನ ರಾಜ್ಯದ ಪಾಲು (₹60,121 ಕೋಟಿ) ಸೇರಿದಂತೆ (ಇದರಲ್ಲಿ ಕೇಂದ್ರ ಪುರಸ್ಕೃತ ಯೋಜನೆಯ ರಾಜ್ಯದ ಪಾಲು 177 ಕೋಟಿಯೂ ಸೇರಿದೆ.) ಮತ್ತು ₹763 ಕೋಟಿಗಳ ಕೇಂದ್ರ ಪುರಸ್ಕೃತ ಯೋಜನೆಗಳಲ್ಲಿನ ಕೇಂದ್ರ ಪಾಲು ಮತ್ತು ಕೇಂದ್ರ ಯೋಜನಾ ಕಾರ್ಯಕ್ರಮಗಳ ಮೇಲಿನ ವೆಚ್ಚವನ್ನು ಒಳಗೊಂಡಿದೆ.

ಒಟ್ಟು ವೆಚ್ಚಕ್ಕೆ ಮತ್ತು ರಾ.ಒ.ಆಂ.ಉ.ಕ್ಕೆ ಯೋಜನಾ ವೆಚ್ಚದ ಶೇಕಡಾವಾರನ್ನು ಸೂಚಿಸುವ ನಕ್ಷೆಯನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

(₹ ಕೋಟಿಗಳಲ್ಲಿ)

| ವಿವರ | 2011–12 | 2012–13 | 2013–14 | 2014–15 | 2015–16 |
|---|---|---|---|---|---|
| ಒಟ್ಟು ವೆಚ್ಚ | 82,436 | 92,874 | 106,832 | 123,812 | 138,398 |
| ಯೋಜನಾ ವೆಚ್ಚ | 35,220 | 37,453 | 44,260 | 53,740 | 60,884 |
| ಒಟ್ಟು ವೆಚ್ಚದ ಶತಾಂಶವಾಗಿ ಯೋಜನಾ ವೆಚ್ಚ | 42.72 | 40.33 | 41.43 | 43.40 | 44.00 |
| ರಾ.ಒ.ಆಂ.ಉ. * | 434,270 | 520,766 | 601,633 | 685,207 | 735,975 |
| ರಾ.ಒ.ಆಂ.ಉ.ದ ಶತಾಂಶವಾಗಿ ಯೋಜನಾ ವೆಚ್ಚ | 8.11 | 7.19 | 7.36 | 7.84 | 8.27ಡ |
| * ರಾ.ಒ.ಆಂ.ಉ. ದ ಆಕರ : ಮಧ್ಯಂತರ ವಿತ್ತೀಯ ಯೋಜನೆ 2015–19. | | | | | |




## *4.2.1 ಬಂಡವಾಳ ಲೆಕ್ಕದಡಿ ಯೋಜನಾ ವೆಚ್ಚ*

ಕಳೆದ ಐದು ವರ್ಷಗಳಲ್ಲಿ ಒಟ್ಟು ಬಂಡವಾಳ ವೆಚ್ಚದ ಶತಾಂಶವಾಗಿ ಬಂಡವಾಳ ವೆಚ್ಚ (ಯೋಜನೆ)ದ ಪ್ರವೃತ್ತಿಯನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

(₹ ಕೋಟಿಗಳಲ್ಲಿ)

| ವಿವರ | 2011–12 | 2012–13 | 2013–14 | 2014–15 | 2015–16 |
|---|---|---|---|---|---|
| ಒಟ್ಟು ಬಂಡವಾಳ ವೆಚ್ಚ* | 17,321 | 16,581 | 17,642 | 20,198 | 21,369 |
| ಬಂಡವಾಳ ವೆಚ್ಚ* (ಯೋಜನೆ) | 16,653 | 16,241 | 17,290 | 19,909 | 20,874 |
| ಒಟ್ಟು ವೆಚ್ಚದಲ್ಲಿ ಬಂಡವಾಳ ವೆಚ್ಚ (ಯೋಜನೆ)ದ ಶತಾಂಶ* | 96.14 | 97.95 | 98.00 | 98.57 | 97.68 |
| * ಬಂಡವಾಳ ವೆಚ್ಚವು ಬಂಡವಾಳ ವ್ಯಯ ಮತ್ತು ಸಾಲ ಮತ್ತು ಮುಂಗಡಗಳ ವಿತರಣೆಯನ್ನು ಒಳಗೊಂಡಿದೆ. | | | | | |

## 4.3 ಯೋಜನೇತರ ವೆಚ್ಚ


2015–16ರಲ್ಲಿ ಒಟ್ಟು ವೆಚ್ಚದ ಶೇಕಡ 56 ರಷ್ಟಿರುವ ಯೋಜನೇತರ ವೆಚ್ಚವು ₹77,514 ಕೋಟಿಯಷ್ಟಿತ್ತು (ರಾಜಸ್ವದಡಿ ₹77,019 ಕೋಟಿ ಮತ್ತು ಬಂಡವಾಳದಡಿ ₹495 ಕೋಟಿ).

ಒಟ್ಟು ವೆಚ್ಚ ಮತ್ತು ರಾ.ಒ.ಆಂ.ಉ.ದಲ್ಲಿ ಯೋಜನೇತರ ವೆಚ್ಚದ ಶತಾಂಶವನ್ನು ನಕ್ಷೆಯ ರೂಪದಲ್ಲಿ ಕೆಳಗಿನ ಕೋಷ್ಟಕದಲ್ಲಿ ತೋರಿಸಲಾಗಿದೆ.ದ

(₹ ಕೋಟಿಗಳಲ್ಲಿ)

| ವಿವರ | 2011–12 | 2012–13 | 2013–14 | 2014–15 | 2015–16 |
|---|---|---|---|---|---|
| ಒಟ್ಟು ವೆಚ್ಚ | 82,436 | 92,874 | 106,832 | 123,812 | 138,398 |
| ಯೋಜನೇತರ ವೆಚ್ಚ | 47,216 | 55,421 | 62,572 | 70,072 | 77,514 |
| ಒಟ್ಟು ವೆಚ್ಚಕ್ಕೆ ಶತಾಂಶ | 57.28 | 60.00 | 58.57 | 56.60 | 56.01 |
| ರಾ.ಒ.ಆಂ.ಉ. ^^ | 434,270 | 520,766 | 601,633 | 685,207 | 735,975 |
| ರಾ.ಒ.ಆಂ.ಉ.ದ ಯೋಜನೇತರ ವೆಚ್ಚದ ಶತಾಂಶ | 10.87 | 10.64 | 10.40 | 10.23 | 10.53 |

^^ ರಾ.ಒ.ಆಂ.ಉ.ದ ಆಕರ : ಮಧ್ಯಂತರ ವಿತ್ತೀಯ ಯೋಜನೆ 2016-20.



## 4.4 ಬದ್ಧ ವೆಚ್ಚಗಳು(&)

**ಕೆಳಗಿನ ಕೋಷ್ಟಕಗಳಲ್ಲಿ ತೋರಿಸಿರುವ ಬದ್ಧವೆಚ್ಚಗಳ ಏಳು ಅಂಶಗಳ ಜೊತೆಗೆ, ಕರ್ನಾಟಕ ಸರ್ಕಾರವು ತನ್ನ** ಮಧ್ಯಮಾವಧಿ ವಿತ್ತೀಯ ಯೋಜನೆ 2016–20 **ರಲ್ಲಿ ಜಿಲ್ಲಾ ವಿಭಾಗೀಯ ಯೋಜನೆಗಳಡಿಯಲ್ಲಿ ಕೊಟ್ಟಿರುವ ಸಂಬಳಗಳು, ಸೂಚಿತ ಸಹಾಯಧನಗಳು ಮತ್ತು ಇತರ ಆಡಳಿತಾತ್ಮಕ ಖರ್ಚುಗಳನ್ನು ಬದ್ಧವೆಚ್ಚಗಳ ಅಂಶಗಳಾಗಿ ಪರಿಗಣಿಸಿದೆ.** ಕಳೆದ ಐದು ವರ್ಷಗಳಲ್ಲಿ ರಾಜಸ್ವ ಸ್ವೀಕೃತಿ ಹಾಗೂ ರಾಜಸ್ವ ವೆಚ್ಚದ ಮೇಲೆ **ಬದ್ಧವೆಚ್ಚಗಳ ಅಂಶಗಳ ಬೆಳವಣಿಗೆಯ ಪ್ರವೃತ್ತಿಯಲ್ಲಿ ನಿರ್ದಿಷ್ಟ ಲೆಕ್ಕದ ಉದ್ದೇಶಿತ ಶೀರ್ಷಿಕೆಗಳ ಸಂಕೇತಗಳ** ಪ್ರವೃತ್ತಿಗಳನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

(₹ ಕೋಟಿಗಳಲ್ಲಿ)

| ಅಂಶಗಳು | 2011–12 | 2012–13 | 2013–14 | 2014–15 | 2015–16 |
|---|---|---|---|---|---|
| ಬದ್ಧ ವೆಚ್ಚಗಳು ಇದರಲ್ಲಿ | 51,676 | 61,106 | 73,413 | 81,045 | 87,178 |
| 1) ಸಂಬಳ(A) | 6,068 | 7,183 | 8,065 | 8,901 | 9,167 |
| 2) ಬಡ್ಡಿ ಪಾವತಿ | 6,604 | 6,833 | 7,837 | 9,804(E) | 11,343(B) |
| 3) ಪಿಂಚಣಿ ಪಾವತಿ | 5,436 | 7,227 | 9,152 | 10,118 | 11,251 |
| 4) ಸಹಾಯ ಧನಗಳು(C) | 7,390 | 10,709 | 13,323 | 11,153 | 13,149 |
| 5) ಸಹಾಯಾನುದಾನ(D) | 4,474 | 4,636 | 7,079 | 7,746 | 7,250 |
| 6) ಪಂ.ರಾ.ಸಂಸ್ಥೆಗಳು ಹಾಗು ನಗರ ಸ್ಥಳೀಯ ಸಂಸ್ಥೆಗಳಿಗೆ ಪಾಲುಗಳು | 19,460 | 22,542 | 25,532 | 31,001 | 32,771 |
| 7) ಸಾಮಾಜಿಕ ಭದ್ರತಾ ಪಿಂಚಣಿಗಳು | 2,244 | 1,880 | 2,425 | 2,322 | 2,247 |
| ರಾಜಸ್ವ ಸ್ವೀಕೃತಿಗಳು | 69,806 | 78,176 | 89,543 | 104,142 | 118,817 |
| ರಾಜಸ್ವ ವೆಚ್ಚ | 65,115 | 76,293 | 89,190 | 103,614 | 117,029 |
| ರಾಜಸ್ವ ಸ್ವೀಕೃತಿಯಲ್ಲಿ ಬದ್ಧ ವೆಚ್ಚದ ಶತಾಂಶ | 74 | 78 | 82 | 78 | 73 |
| ರಾಜಸ್ವ ವೆಚ್ಚದಲ್ಲಿ ಬದ್ಧ ವೆಚ್ಚದ ಶತಾಂಶ | 79 | 80 | 82 | 78 | 74 |

(&) ಕರ್ನಾಟಕ ಸರ್ಕಾರವು ಫೆಬ್ರವರಿ 2014ರಲ್ಲಿ ರಾಜ್ಯ ವಿಧಾನಮಂಡಲದಲ್ಲಿ ಮಂಡಿಸಿದ ಮಧ್ಯಮಾವಧಿ ವಿತ್ತೀಯ ಯೋಜನೆ 2016–20ರಲ್ಲಿ ಇತರ ವೆಚ್ಚಗಳ ಜೊತೆಗೆ ಆಡಳಿತಾತ್ಮಕ ವೆಚ್ಚಗಳು ಹಾಗೂ ಅವ್ಯಕ್ತ ಸಹಾಯಧನ – ಇವುಗಳನ್ನು ಬದ್ಧ ವೆಚ್ಚಗಳೆಂದು ಪರಿಗಣಿಸಿಲ್ಲ.

(A) ಸಂಬಳ – ರಾಜ್ಯ ವಲಯದ ನೌಕರರ ಒಳಗೊಂಡು, ಪಂಚಾಯತ್ ರಾಜ್ ಸಂಸ್ಥೆಗಳಿಗೆ ವರ್ಗಾಯಿಸಲ್ಪಟ್ಟ ರಾಜ್ಯ ಸರ್ಕಾರಿ ಸಿಬ್ಬಂದಿಯ ಸಂಬಳ ಹೊರತುಪಡಿಸಿದೆ.

(B) 'ಸಾಮಾನ್ಯ ಸೇವೆ', 'ಸಾಮಾಜಿಕ ಸೇವೆ' ಮತ್ತು 'ಆರ್ಥಿಕ ಸೇವೆ' ಉಪವಿಭಾಗಗಳಡಿಯಲ್ಲಿ ಸೇರಿರುವ ಕಾರ್ಯಿಕ ಪ್ರಧಾನ ಶೀರ್ಷಿಕೆಯಡಿಯಲ್ಲಿ ಲೆಕ್ಕ ಮಾಡಿರುವ ಆಯವ್ಯಯದ ಹೊರಗಿನ ಸಾಲಗಳ ಮೇಲಿನ ಬಡ್ಡಿ (₹399.53 ಕೋಟಿಗಳು) ಪಾವತಿಯನ್ನು ಹೊರತುಪಡಿಸಿದೆ.

(C) ಸಹಾಯಧನಗಳು '106 – ಸಹಾಯಧನ' ಅಡಿಯಲ್ಲಿನ ವೆಚ್ಚವನ್ನು ಮಾತ್ರ ಸೂಚಿಸುತ್ತದೆ. ಪಂ.ರಾ.ಸಂಸ್ಥೆ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಸಹಾಯಧನ ಹೊರತುಪಡಿಸಿದೆ.

(D) ಪ್ರತ್ಯೇಕ ಸಾಲು ವಿಷಯಗಳಾಗಿ ಕೆಳಗೆ ತೋರಿಸಿದ ಪಂ.ರಾ.ಸಂಸ್ಥೆಗಳ ಹಾಗೂ ನಗರ ಸ್ಥಳೀಯ ಸಂಸ್ಥೆಗಳಿಗೆ ನೀಡಿದ ಅವಸರಣಗಳನ್ನು ಹೊರತುಪಡಿಸಿದೆ.

(E) 'ಸಾಮಾನ್ಯ ಸೇವೆ', 'ಸಾಮಾಜಿಕ ಸೇವೆ' ಮತ್ತು 'ಆರ್ಥಿಕ ಸೇವೆ' ಉಪವಿಭಾಗಗಳಡಿಯಲ್ಲಿ ಸೇರಿರುವ ಕಾರ್ಯಿಕ ಪ್ರಧಾನ ಶೀರ್ಷಿಕೆಯಡಿಯಲ್ಲಿ ಲೆಕ್ಕ ಮಾಡಿರುವ ಆಯವ್ಯಯದ ಹೊರಗಿನ ಸಾಲಗಳ ಮೇಲಿನ ಬಡ್ಡಿ (₹597 ಕೋಟಿಗಳು) ಪಾವತಿಯನ್ನು ಹೊರತುಪಡಿಸಿದೆ.

# ಅಧ್ಯಾಯ – V

## ಧನವಿನಿಯೋಗ ಲೆಕ್ಕಗಳು

### 5.1 ಧನ ವಿನಿಯೋಗ ಲೆಕ್ಕಗಳ ಸಾರಾಂಶ

ಕರ್ನಾಟಕ ಸರ್ಕಾರದ 2015–16 ರ ಧನವಿನಿಯೋಗ ಲೆಕ್ಕಗಳು ಭಾರತ ಸಂವಿಧಾನ ಅನುಚ್ಛೇದ 204 ಮತ್ತು 205 ರ ಅನ್ವಯ ಅನುಮೋದಿಸಿದ ಧನವಿನಿಯೋಗ ಅಧಿನಿಯಮಕ್ಕೆ ಲಗತ್ತಿಸಿದ ಅನುಸೂಚಿಯಲ್ಲಿ ವಿವರಿಸಿದ ಅವಕಾಶಗಳಿಗೆ ಪ್ರತಿಯಾಗಿ ಮಾಡಿದ ವೆಚ್ಚದ ಲೆಕ್ಕಗಳನ್ನು ತೋರಿಸುತ್ತದೆ. 2015–16ರ ರಾಜ್ಯ ಸಂಚಿತ ನಿಧಿಯ ಪ್ರಮುಖ ವಿಭಾಗಗಳ ಧನವಿನಿಯೋಗ ಲೆಕ್ಕಗಳ ಸಾರಾಂಶವನ್ನು ಈ ಕೆಳಗೆ ನೀಡಲಾಗಿದೆ.

(₹ ಕೋಟಿಗಳಲ್ಲಿ)

| ಕ್ರಸಂ | ವೆಚ್ಚದ ಸ್ವರೂಪ | ಮೂಲ ಅನುದಾನ | ಪೂರಕ ಅನುದಾನ | ಪುನರ್ ವಿನಿಯೋಗ/ ಅಧ್ಯರ್ಪಣೆ | ಒಟ್ಟು | ವಾಸ್ತವ ವೆಚ್ಚ | ಉಳಿತಾಯ (–) ಹೆಚ್ಚಳ (+) |
|---|---|---|---|---|---|---|---|
| 1 | ರಾಜಸ್ವ<br>ಪುರಸ್ಕೃತ<br>ಪ್ರಭೃತ | 100,420<br>*16,657* | 13,871<br>*1,241* | (–) 1,924<br>*(–) 4,034* | 112,367<br>*13,864* | 107,199<br>*13,031* | (–) 5,168<br>*(–) 833* |
| 2 | ಬಂಡವಾಳ<br>ಪುರಸ್ಕೃತ<br>ಪ್ರಭೃತ | 23,152<br>*414* | 3,357<br>... | (–) 222<br>*(–) 26* | 26,411<br>*388* | 23,571<br>*401* | (–) 2,840<br>*(+) 13* |
| *3* | ಸಾರ್ವಜನಿಕ ಋಣ<br>ಪ್ರಭೃತ | *5,788* | ... | *(–) 1,678* | *4,110* | *4,110* | ... |
| 4 | ಸಾಲಗಳು ಮತ್ತು ಮುಂಗಡಗಳು<br>ಪುರಸ್ಕೃತ | 1,533 | 239 | ... | 1,648 | 938 | (–) 710 |
| | **ಒಟ್ಟು** | **147,964** | **18,708** | **(–) 7,884** | **158,788** | **149,250** | **(–) 9,538** |

5.1.1 ಉಳಿತಾಯ / ಹೆಚ್ಚಳಗಳ ಅನುದಾನವಾರು ವಿವರಗಳು

ಕರ್ನಾಟಕ ಸರ್ಕಾರದ 2015–16ರ ಧನ ವಿನಿಯೋಗ ಲೆಕ್ಕಗಳ–ಅನುದಾನವಾರು ಉಳಿತಾಯ/ಹೆಚ್ಚಳಗಳ ವಿವರಗಳು ಕೆಳಕಂಡಂತಿದೆ.

(₹ ಕೋಟಿಗಳಲ್ಲಿ)

| ಕೆಳಗಿನ ಅನುದಾನಗಳಲ್ಲಿ ಉಳಿತಾಯಗಳು | | ರಾಜಸ್ವ | | ಬಂಡವಾಳ | |
|---|---|---|---|---|---|
| ಅನುದಾನ ಸಂಖ್ಯೆ ಮತ್ತು ಹೆಸರು | | ಪುರಸ್ಕೃತ | ಪ್ರಭೃತ | ಪುರಸ್ಕೃತ | ಪ್ರಭೃತ |
| 01 | ಕೃಷಿ ಮತ್ತು ತೋಟಗಾರಿಕೆ | 803.18 | *0.44* | ... | ... |
| 02 | ಪಶುಸಂಗೋಪನೆ ಮತ್ತು ಮೀನುಗಾರಿಕೆ | 80.20 | *0.01* | 67.83 | ... |
| 03 | ಆರ್ಥಿಕ | 1,215.44 | *3,774.41* | 67.61 | ... |
| 04 | ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ | 90.20 | *16.24* | 6.41 | ... |
| 05 | ಗೃಹ ಮತ್ತು ಸಾರಿಗೆ | ... | *38.34* | 0.17 | *25.19* |
| 06 | ಮೂಲ ಸೌಕರ್ಯ ಅಭಿವೃದ್ಧಿ | 2.80 | ... | 176.05 | ... |

| ಕೆಳಗಿನ ಅನುದಾನಗಳಲ್ಲಿ ಉಳಿತಾಯಗಳು | | ರಾಜಸ್ವ | | ಬಂಡವಾಳ | |
|---|---|---|---|---|---|
| ಅನುದಾನ ಸಂಖ್ಯೆ ಮತ್ತು ಹೆಸರು | | ಪುರಸ್ಕೃತ | ಪ್ರಭೃತ | ಪುರಸ್ಕೃತ | ಪ್ರಭೃತ |
| 07 | ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ | 459.41 | *9.30* | 318.24 | ... |
| 08 | ಅರಣ್ಯ, ಜೀವವಿಜ್ಞಾನ ಮತ್ತು ಪರಿಸರ | 68.68 | *199.41* | 0.01 | ... |
| 09 | ಸಹಕಾರ | 54.18 | ... | 30.10 | ... |
| 10 | ಸಮಾಜ ಕಲ್ಯಾಣ | 91.69 | ... | 41.39 | ... |
| 11 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | 205.70 | ... | 11.22 | ... |
| 12 | ವಾರ್ತಾ ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳು | 18.04 | ... | 64.19 | ... |
| 13 | ಆಹಾರ ಮತ್ತು ನಾಗರೀಕ ಸರಬರಾಜು | 81.59 | *0.04* | 7.80 | ... |
| 14 | ಕಂದಾಯ | 478.41 | ... | 3.01 | ... |
| 15 | ಮಾಹಿತಿ ತಂತ್ರಜ್ಞಾನ | 8.32 | ... | ... | ... |
| 16 | ವಸತಿ | 1.69 | *28.08* | ... | *0.20* |
| 17 | ಶಿಕ್ಷಣ | 866.04 | ... | 146.48 | ... |
| 18 | ವಾಣಿಜ್ಯ ಮತ್ತು ಕೈಗಾರಿಕೆಗಳು | 183.51 | ... | 104.27 | ... |
| 19 | ನಗರಾಭಿವೃದ್ಧಿ | 663.19 | ... | 85.83 | ... |
| 20 | ಲೋಕೋಪಯೋಗಿ | 282.67 | *8.93* | 231.37 | *0.39* |
| 21 | ಜಲ ಸಂಪನ್ಮೂಲ | 198.62 | *157.98* | 2,231.65 | *0.01* |
| 22 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ | 904.50 | ... | 39.91 | ... |
| 23 | ಕಾರ್ಮಿಕ | 126.72 | ... | 0.02 | ... |
| 24 | ಇಂಧನ | 0.50 | ... | 44.82 | ... |
| 25 | ಕನ್ನಡ ಮತ್ತು ಸಂಸ್ಕೃತಿ | 20.22 | ... | 0.88 | ... |
| 26 | ಯೋಜನೆ, ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ | 157.00 | ... | 100.82 | ... |
| 27 | ಕಾನೂನು | 45.28 | *37.61* | ... | ... |
| 28 | ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ | 28.94 | *0.58* | ... | ... |
| *29* | *ಋಣ ನಿರ್ವಹಣೆ* | *596.41* | ... | *1,677.70* | ... |
| ಕೆಳಗಿನ ಅನುದಾನಗಳಲ್ಲಿ ಹೆಚ್ಚಳ | | ಪುರಸ್ಕೃತ | ಪ್ರಭೃತ | ಪುರಸ್ಕೃತ | ಪ್ರಭೃತ |
| 01 | ಕೃಷಿ ಮತ್ತು ತೋಟಗಾರಿಕೆ | ... | ... | 7.93 | ... |
| 05 | ಗೃಹ ಮತ್ತು ಸಾರಿಗೆ | 44.94 | ... | ... | ... |
| 06 | ಮೂಲ ಸೌಕರ್ಯ ಅಭಿವೃದ್ಧಿ | ... | *0.17* | ... | *4.95* |
| 19 | ನಗರಾಭಿವೃದ್ಧಿ | ... | ... | ... | *8.05* |

## 5.2 ಉಳಿತಾಯ ಪ್ರವೃತ್ತಿ

ಧನವಿನಿಯೋಗ ಲೆಕ್ಕಗಳಲ್ಲಿ ಉಳಿತಾಯವು ರಾಜ್ಯ ವಿಧಾನ ಮಂಡಲವು ಅನುಮೋದಿಸಿದ ಧನವಿನಿಯೋಗ ಅಧಿನಿಯಮದಲ್ಲಿ ನೀಡಿದ ಅನೇಕ ಉದ್ದೇಶಿತ ವೆಚ್ಚಗಳ ಅವಕಾಶಗಳನ್ನು ಬಳಸದಿರುವುದನ್ನು ತೋರಿಸುತ್ತದೆ. ರಾಜ್ಯ ವಿಧಾನ ಮಂಡಲವು ಅನುಮೋದಿಸಿದ ಅವಕಾಶಗಳನ್ನು ಉಲ್ಲೇಖಿಸಿ ಅಧ್ಯರ್ಪಣೆ ಮಾಡಿದ ಮೊತ್ತವನ್ನು (ಉಳಿತಾಯವೆಂದು ಪರಿಗಣಿಸಿ), ಉಳಿತಾಯಗಳನ್ನು ಲೆಕ್ಕ ಮಾಡಲಾಗುವುದು. ಹೊರತುಪಡಿಸಿ ಕಳೆದ ಐದು ವರ್ಷಗಳ


ನೀಡಲಾಗಿದೆ. ಪುರಸ್ಕೃತ ಮತ್ತು ಪ್ರಭೃತ ಹಾಗು ರಾಜಸ್ವ ಮತ್ತು ಬಂಡವಾಳ ವಿಭಾಗಗಳಲ್ಲಾದ ಉಳಿತಾಯ ಪ್ರವೃತ್ತಿಗಳನ್ನು ಕ್ರಮವಾಗಿ ಕೋಷ್ಟಕ 5.2.1 ಮತ್ತು ಕೋಷ್ಟಕ 5.2.2 ಗಳಲ್ಲಿ ಈ ಕೆಳಗೆ ನೀಡಲಾಗಿದೆ.

**ಸತತ ಉಳಿತಾಯಗಳು (ಪುರಸ್ಕೃತ ವಿಭಾಗ)**

(ಕೋಷ್ಟಕ **5.2.1**)

**(₹ ಕೋಟಿಗಳಲ್ಲಿ)**

| ವರ್ಷ | ರಾಜಸ್ವ ವಿಭಾಗ | | | | ಬಂಡವಾಳ ವಿಭಾಗ | | | |
|---|---|---|---|---|---|---|---|---|
| | ಅವಕಾಶ | ವೆಚ್ಚ | ಉಳಿತಾಯ | ಅವಕಾಶದ ಶತಾಂಶವಾಗಿ | ಅವಕಾಶ | ವೆಚ್ಚ | ಉಳಿತಾಯ | ಅವಕಾಶದ ಶತಾಂಶವಾಗಿ |
| 2011–12 | 65,469 | 59,056 | 6,413 | 9.80 | 22,223 | 18,000 | 4,223 | 19.00 |
| 2012–13 | 88,265 | 69,672 | 18,593 | 21.06 | 23,339 | 17,608 | 5,731 | 24.56 |
| 2013–14 | 97,254 | 82,071 | 15,183 | 15.61 | 25,071 | 19,031 | 6,040 | 24.09 |
| 2014–15 | 109,864 | 94,250 | 15,614 | 14.21 | 25,531 | 21,408 | 4,123 | 16.14 |
| 2015–16 | 114,291 | 107,199 | 7,092 | 6.21 | 28,281 | 24,509 | 3,772 | 13.34 |




## ಸತತ ಉಳಿತಾಯಗಳು (ಪ್ರಭೃತ ವಿಭಾಗ)

(ಕೋಷ್ಟಕ 5.2.2)

(₹ ಕೋಟಿಗಳಲ್ಲಿ)

| ವರ್ಷ | ರಾಜಸ್ವ ವಿಭಾಗ | | | | ಬಂಡವಾಳ ವಿಭಾಗ | | | |
|---|---|---|---|---|---|---|---|---|
| | ಅವಕಾಶ | ವೆಚ್ಚ | ಉಳಿತಾಯ | ಅವಕಾಶದ ಶತಾಂಶವಾಗಿ | ಅವಕಾಶ | ವೆಚ್ಚ | ಉಳಿತಾಯ | ಅವಕಾಶದ ಶತಾಂಶವಾಗಿ |
| 2011-12 | 7,579 | 6,453 | 1,126 | 14.86 | 4,473 | 3,320 | 1,153 | 25.78 |
| 2012-13 | 9,120 | 8,942 | 178 | 1.95 | 5,670 | 3,733 | 1,937 | 34.16 |
| 2013-14 | 9,149 | 8,791 | 358 | 3.91 | 5,840 | 3,823 | 2,017 | 34.54 |
| 2014-15 | 11,502 | 10,618 | 884 | 7.69 | 7,040 | 5,090 | 1,950 | 27.70 |
| 2015-16 | 17,898 | 13,031 | 4,867 | 27.19 | 6,202 | 4,511 | 1,691 | 27.27 |




### 5.3 ಮಹತ್ವದ ಉಳಿತಾಯಗಳು :

ಅನುದಾನದಡಿಯ ಗಣನಾರ್ಹ ಉಳಿತಾಯಗಳು ಕೆಲವು ಯೋಜನೆಗಳ / ಕಾರ್ಯಕ್ರಮಗಳ ಅನುಷ್ಠಾನವಾಗದಿರುವಿಕೆ ಅಥವಾ ನಿಧಾನಗತಿಯ ಅನುಷ್ಠಾನವನ್ನು ಅಥವಾ ಆಯವ್ಯಯದಲ್ಲಿ ಅಧಿಕವಾದ ಹಂಚಿಕೆಯನ್ನು ಸೂಚಿಸುತ್ತದೆ. ಕಳೆದ ಐದು ವರ್ಷಗಳಲ್ಲಿ ರಾಜಸ್ವ ಮತ್ತು ಬಂಡವಾಳ ವಿಭಾಗಗಳಲ್ಲಿ ಸತತವಾಗಿ ಮತ್ತು ಗಣನೀಯವಾಗಿ ನಿವ್ವಳ ಅವಕಾಶದ ಶೇಕಡ 10ಕ್ಕಿಂತಲೂ ಹೆಚ್ಚು ಉಳಿತಾಯ ಕಂಡು ಬಂದ ಕೆಲವು ಅನುದಾನಗಳನ್ನು ಕೆಳಗೆ ನೀಡಲಾಗಿದೆ.

(ಶತಾಂಶದಲ್ಲಿ)

| ಅನುದಾನ ಸಂಖ್ಯೆ | ರಾಜಸ್ವ ವಿಭಾಗ | 2011-12 | 2012-13 | 2013-14 | 2014-15 | 2015-16 |
|---|---|---|---|---|---|---|
| 01 | ಕೃಷಿ ಮತ್ತು ತೋಟಗಾರಿಕೆ | 34 | 39 | 31 | 26 | 14 |
| 04 | ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ | 21 | 28 | 26 | 35 | 16 |
| 20 | ಲೋಕೋಪಯೋಗಿ | 13 | 12 | 11 | 13 | 11 |
| 23 | ಕಾರ್ಮಿಕ | 40 | 29 | 28 | 33 | 13 |
| 26 | ಯೋಜನೆ, ಸಾಂಖ್ಯಿಕ, ವಿಜ್ಞಾನ ಹಾಗೂ ತಂತ್ರಜ್ಞಾನ | 30 | 41 | 40 | 13 | 21 |
| | ಬಂಡವಾಳ ವಿಭಾಗ | | | | | |
| 02 | ಪಶುಸಂಗೋಪನೆ ಮತ್ತು ಮೀನುಗಾರಿಕೆ | 27 | 34 | 18 | 22 | 38 |
| 07 | ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ | 17 | 17 | 51 | 12 | 27 |
| 11 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | 35 | 70 | 19 | 41 | 13 |

## 5.4 ಪೂರಕ ಅಂದಾಜುಗಳು

2015-16 ರಲ್ಲಿ ಭಾರತ ಸಂವಿಧಾನದ ಅನುಚ್ಛೇದ 205 ರ ಪ್ರಕಾರ ₹18,708 ಕೋಟಿಗಳಷ್ಟು ಹೆಚ್ಚುವರಿ ಅನುದಾನವನ್ನು ಪೂರಕ ಅಂದಾಜುಗಳ ಮುಖಾಂತರ ಪಡೆಯಲಾಗಿದೆ. ₹10 ಕೋಟಿಗಿಂತ ಹೆಚ್ಚಾದ ಅನಗತ್ಯ ಉಳಿತಾಯ ಅಥವಾ ಹೆಚ್ಚಳದ ಕೆಲವು ಪ್ರಕರಣಗಳನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

### ಅನಗತ್ಯ ಪೂರಕ ಅಂದಾಜುಗಳು

(₹ ಕೋಟಿಗಳಲ್ಲಿ)

| ಅನು. ಸಂಖ್ಯೆ | ಲೆಕ್ಕ ಶೀರ್ಷಿಕೆ | ಮೂಲ ಅಂದಾಜು | ಪೂರಕ ಅಂದಾಜು | ವಾಸ್ತವ ವೆಚ್ಚ | ಉಳಿತಾಯ |
|---|---|---|---|---|---|
| 01 | 2401-00-119-4-06-059 | 88.94 | 50.06 | 86.40 | 52.60 |
| 01 | 2401-00-800-1-56-059 | 44.45 | 4.76 | 38.81 | 10.40 |
| 03 | 2071-01-103-3-01-251 | 6,549.14 | 425.40 | 6,541.26 | 433.28 |
| 03 | 7610-00-201-0-03-393 | ... | 55.00 | ... | 55.00 |
| 07 | 2515-00-196-1-05-300 | 132.24 | 4.76 | 74.88 | 62.12 |
| 07 | 2515-00-197-1-10-300 | 346.20 | 9.42 | 161.62 | 194.00 |
| 07 | 4515-00-103-3-00-132 | ... | 11.42 | ... | 11.42 |
| 10 | 2225-03-277-2-48-103 | ... | 25.00 | ... | 25.00 |
| 14 | 2235-60-102-2-01-251 | 764.52 | 1.50 | 730.21 | 35.81 |
| 18 | 2851-00-102-0-69-106 | 110.00 | 15.00 | 100.00 | 25.00 |
| 18 | 4860-04-190-3-02-211 | ... | 39.95 | ... | 39.95 |
| 18 | 2860-04-190-1-16-394 | 20.00 | 12.78 | ... | 32.78 |
| 22 | 2210-03-800-0-18-059 | 816.90 | 40.72 | 536.62 | 321.00 |
| 22 | 2210-03-800-0-18-422 | 241.03 | 11.47 | 144.63 | 107.87 |
| 22 | 2210-03-800-0-18-423 | 97.09 | 4.53 | 59.34 | 42.28 |
| 22 | 2210-06-003-0-22-117 | ... | 185.00 | ... | 185.00 |

| ಅತಿರಿಕ್ತ ಪೂರಕ ಅಂದಾಜು | | | | | |
|---|---|---|---|---|---|
| ಅನು. ಸಂಖ್ಯೆ | ಲೆಕ್ಕ ಶೀರ್ಷಿಕೆ | ಮೂಲ ಅಂದಾಜು | ಪೂರಕ ಅಂದಾಜು | ವಾಸ್ತವ ವೆಚ್ಚ | ಉಳಿತಾಯ |
| 01 | 2401–00–102–0–08–422 | 14.24 | 13.90 | 17.45 | 10.69 |
| 02 | 2403–00–101–0–21–051 | 9.86 | 34.75 | 20.69 | 23.92 |
| 07 | 2501–01–198–6–01–300 | 78.55 | 114.94 | 137.40 | 56.09 |
| 08 | 2406–01–800–0–15–139 | ... | 100.00 | 78.78 | 21.22 |
| 14 | 2075–00–101–1–01–100 | 65.00 | 73.00 | 115.27 | 22.73 |
| 18 | 2853–02–102–0–17–059 | ... | 20.00 | 9.94 | 10.06 |

# ಅಧ್ಯಾಯ VI

## ಆಸ್ತಿ ಮತ್ತು ಜವಾಬ್ದಾರಿಗಳು

### 6.1 ಆಸ್ತಿಗಳು

ಸರ್ಕಾರದ ಆಸ್ತಿ ಮತ್ತು ಜವಾಬ್ದಾರಿಗಳ ವಿವರಗಳನ್ನು ಹಣಕಾಸು ಲೆಕ್ಕಗಳು **ಸಂಪುಟ–1ರ** ವಿವರಣಾ ಪಟ್ಟಿ–1ರಲ್ಲಿ ತೋರಿಸಲಾಗಿದೆ. ಪ್ರಸ್ತುತ ಲೆಕ್ಕ ಪತ್ರ ನಮೂನೆಯು ಜಮೀನು, ಕಟ್ಟಡಗಳು ಮುಂತಾದ ಸರ್ಕಾರಿ ಆಸ್ತಿಗಳನ್ನು ಸ್ವಾಧೀನ ಪಡಿಸಿಕೊಂಡ/ಖರೀದಿಸಿದ ವರ್ಷದ ಹೊರತುಪಡಿಸಿ ಪ್ರಸ್ತುತ ಲೆಕ್ಕದಲ್ಲಿ ಅವುಗಳ ಮೌಲ್ಯವನ್ನು ಬಿಂಬಿಸುವುದಿಲ್ಲ. 31 ಮಾರ್ಚ್ 2016ರ ಅಂತ್ಯಕ್ಕೆ ಸರ್ಕಾರಿ ಆಸ್ತಿಯ ಮೌಲ್ಯಗಳು ಪ್ರಧಾನವಾಗಿ ನಗದು ಶಿಲ್ಕು ಮತ್ತು ನಗದು ಶಿಲ್ಕಿನ ಹೂಡಿಕೆಗಳು (₹27,118 ಕೋಟಿ), ಕ್ರಮವೃದ್ಧಿಯ ಬಂಡವಾಳ ವೆಚ್ಚ (₹176,753 ಕೋಟಿಗಳು) ಮತ್ತು ಸಾಲಗಳು ಮತ್ತು ಮುಂಗಡಗಳು (₹13,813 ಕೋಟಿ), ನಾಗರೀಕ ಮುಂಗಡಗಳು (₹7 ಕೋಟಿ) ಮತ್ತು ಇರಸಾಲು (₹537.01 ಕೋಟಿ) ಗಳನ್ನು ಒಳಗೊಂಡಿತ್ತು.

2015–16ನೇ ಸಾಲಿನ ಅಂತ್ಯಕ್ಕೆ ಸಾರ್ವಜನಿಕ ಉದ್ದಿಮೆಗಳಲ್ಲಿ ಷೇರು ಬಂಡವಾಳವಾಗಿ ಸರ್ಕಾರದ ಹೂಡಿಕೆಯು ₹61,356 ಕೋಟಿಗಳಷ್ಟಿತ್ತು. ಇದು ಮುಖ್ಯವಾಗಿ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು (₹2,467ಕೋಟಿ), ಸರ್ಕಾರಿ ಕಂಪನಿಗಳು/ ಸಾರ್ವಜನಿಕ ಉದ್ದಿಮೆಗಳು (₹56,229 ಕೋಟಿ), ಜಾಯಿಂಟ್ ಸ್ಟಾಕ್ ಕಂಪನಿಗಳು (₹2,299 ಕೋಟಿ) ಮತ್ತು ಸಹಕಾರಿ ಸಂಸ್ಥೆಗಳು ಹಾಗೂ ಸ್ಥಳೀಯ ಸಂಸ್ಥೆಗಳು (₹361 ಕೋಟಿ) ಸೇರಿ ಶಾಸನಬದ್ಧ ನಿಗಮಗಳ ಹೂಡಿಕೆಗಳನ್ನು ಒಳಗೊಂಡಿದೆ. ಆದರೆ ಈ ಸಾಲಿನಲ್ಲಿ ಒಟ್ಟು ಸರ್ಕಾರಿ ಹೂಡಿಕೆಗಳ ಮೇಲೆ ಪಡೆದ ಡಿವಿಡೆಂಡುಗಳು ₹69 ಕೋಟಿಯಷ್ಟಿತ್ತು (ಶೇಕಡ 0.11). 2015–16ರಲ್ಲಿ ಹೂಡಿಕೆಗಳು ₹371 ಕೋಟಿಯಷ್ಟು ಕಡಿಮೆಯಾಗಿದ್ದರೆ, ಡಿವಿಡೆಂಡುಗಳ ಆದಾಯವೂ ಸಹ ₹5.44 ಕೋಟಿಗಳಷ್ಟು ಇಳಿಕೆಯಾಗಿತ್ತು.

ಭಾರತೀಯ ರಿಜರ್ವ್ ಬ್ಯಾಂಕ್‌ನಲ್ಲಿ 1ನೇ ಏಪ್ರಿಲ್ 2015ಕ್ಕೆ ಶಿಲ್ಕು ₹5 ಕೋಟಿಯಷ್ಟಿದ್ದು, ಮಾರ್ಚ್ 2016ರ ಅಂತ್ಯಕ್ಕೆ ₹(-)75 ಕೋಟಿಗೆ ಇಳಿಕೆಯಾಗಿತ್ತು.

### 6.2 ಋಣ ಮತ್ತು ಜವಾಬ್ದಾರಿಗಳು

ಭಾರತ ಸಂವಿಧಾನದ ಅನುಚ್ಛೇದ 293(1)ರ ಅಧಿಕಾರದನ್ವಯ ರಾಜ್ಯ ಸರ್ಕಾರಗಳು, ಸಂಚಿತ ನಿಧಿಯ ಭದ್ರತೆಯ ಮೇಲೆ, ರಾಜ್ಯ ವಿಧಾನ ಮಂಡಲವು ಕಾಲ ಕಾಲಕ್ಕೆ ನಿಗದಿ ಪಡಿಸಿದ ಮಿತಿಗೆ ಅನುಗುಣವಾಗಿ ಸಾಲಗಳನ್ನು ಪಡೆಯಬಹುದಾಗಿದೆ.

11ನೇ ವಿತ್ತ ಆಯೋಗದ ಶಿಫಾರಸ್ಸಿಗೆ ಅನುಗುಣವಾಗಿ ಕರ್ನಾಟಕ ಸರ್ಕಾರವು ವಿತ್ತೀಯ ಜವಾಬ್ದಾರಿ ಅಧಿನಿಯಮ 2002ನ್ನು ಜಾರಿಗೆ ತಂದ ಮೊದಲ ರಾಜ್ಯವಾಗಿದೆ. 13ನೇ ಹಣಕಾಸು ಆಯೋಗದ ಶಿಫಾರಸಿನ ಮೇರೆಗೆ ಹಾಗೂ ವಿತ್ತೀಯ ಜವಾಬ್ದಾರಿ ಅಧಿನಿಯಮದ ತಿದ್ದುಪಡಿ (ಮೇ 2011)ಗೆ ಅನುಗುಣವಾಗಿ ರಾಜ್ಯವು 2015–16ರ ಅಂತ್ಯಕ್ಕೆ ಬಾಕಿಯಿರುವ ಸಾಲದ ಮೊತ್ತವು ರಾ.ಒ.ಅಂ.ಉ. ದ ಶೇಕಡಾ 24.91ರ ವಿತ್ತೀಯ ಗುರಿ ನಿಗದಿಯಾಗಿತ್ತು. ಹಾಗೂ ನಿಗದಿತ ಹಣಕಾಸು

ಕಾರ್ಯ ನಿರ್ವಹಣೆಯ ಮೌಲ್ಯನಿರ್ಧಾರಣ ಮಾನದಂಡವಾಗಿ 'ಒಟ್ಟು ಜವಾಬ್ದಾರಿ'ಯ ವ್ಯಾಪ್ತಿಯನ್ನು ವಿಸ್ತರಿಸಲು ಎಲ್ಲಿ ಅಸಲು ಮತ್ತು/ಅಥವಾ ಬಡ್ಡಿಗಳನ್ನು ಕರ್ನಾಟಕ ಸರಕಾರದ ಆಯವ್ಯಯದಿಂದ ಹೊರತುಪಡಿಸಿ ತುಂಬಿಸಬೇಕಾಗುವುದೋ ಅಂತಹ ಸಾರ್ವಜನಿಕ ಉದ್ದಿಮೆಗಳ ಮತ್ತು ವಿಶೇಷ ಉದ್ದೇಶದ ವಾಹನಗಳ ಮತ್ತು ಇತರ ತತ್ಸಮಾನ ಉಪಕರಣಗಳನ್ನು ಸೇರಿಸಿ 'ಒಟ್ಟು ಜವಾಬ್ದಾರಿ' ವಿಸ್ತರಿಸುವುದಕ್ಕಾಗಿ ಕನಾಟಕ ಸರ್ಕಾರವು ಕರ್ನಾಟಕ ಹಣಕಾಸು ಜವಾಬ್ದಾರಿ (ತಿದ್ದುಪಡಿ) ಅಧಿನಿಯಮ 2014ನ್ನು 28ನೇ ಫೆಬ್ರವರಿ 2014ರಲ್ಲಿ ಜಾರಿಗೆ ತಂದಿದೆ.

ಕಳೆದ ಐದು ವರ್ಷಗಳಲ್ಲಿ ರಾಜ್ಯ ಸರ್ಕಾರದ ಸಾರ್ವಜನಿಕ ಋಣ ಮತ್ತು ಒಟ್ಟು ಜವಾಬ್ದಾರಿಗಳ ವಿವರಗಳನ್ನು ಕೆಳಗೆ ನೀಡಲಾಗಿದೆ.

(₹ ಕೋಟಿಗಳಲ್ಲಿ)

| ವರ್ಷ | ರಾ.ಒ.ಅಂ.ಉ | ಸಾರ್ವಜನಿಕ ಋಣ | ರಾ.ಒ.ಅಂ.ಉ. ಶತಾಂಶ | ಸಾರ್ವಜನಿಕ ಲೆಕ್ಕ^ | ರಾ.ಒ.ಅಂ.ಉ. ಶತಾಂಶ | ಒಟ್ಟು ಜವಾಬ್ದಾರಿಗಳು^ | ರಾ.ಒ.ಅಂ.ಉ. ಶತಾಂಶ |
|---|---|---|---|---|---|---|---|
| 2011–12 | 434,270 | 65,315 | 15.04 | 37,715 | 8.68 | 103,030 | 23.72 |
| 2012–13 | 520,766 | 75,052 | 14.41 | 41,715 | 8.01 | 116,767 | 22.42 |
| 2013–14 | 601,633 | 88,522 | 14.71 | 46,796 | 7.78 | 135,318 | 22.49 |
| 2014–15 | 685,207 | 105,585 | 15.41 | 52,968 | 7.73 | 158,553 | 23.14 |
| 2015–16 | 735,975 | 122,547 | 16.65 | 53,076 | 7.21 | 175,623(#) | 23.86 |
| * | ರಾ.ಒ.ಅಂ.ಉ. ದ 2015–16 ಆಕರ: ಮಧ್ಯಂತರ ವಿತ್ತೀಯ ಯೋಜನೆ 2016–20 | | | | | | |
| ^ | ಯೋಜನೆ ಹಣಕಾಸು ಲೆಕ್ಕಗಳ ವಿವರಣಾಪಟ್ಟಿ 6 (i) ರಲ್ಲಿ ತೋರಿಸಿರುವಂತೆ ಸಣ್ಣ ಉಳಿತಾಯಗಳು ಮತ್ತು ಇತರೆ ಜವಾಬ್ದಾರಿಗಳ ನಿವ್ವಳವನ್ನು ತೋರಿಸುತ್ತದೆ. | | | | | | |
| # | ರಾಜ್ಯದ ಸಂಚಿತ ನಿಧಿಯ ಭಾಗವಲ್ಲದ, ಆದರೆ ಹಣಕಾಸಿನ ಕಾರ್ಯನಿರ್ವಹಣೆಯ ಮಾನದಂಡವಾಗಿ 'ಒಟ್ಟು ಜವಾಬ್ದಾರಿ'ಯ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿರುವ ಆಯವ್ಯಯದ ಹೊರಗಿನ ಸಾಲದ ಮೊತ್ತ ₹7,699 ಕೋಟಿಗಳನ್ನು ಹೊರತುಪಡಿಸಿದೆ. ಹೆಚ್ಚಿನ ವಿವರಗಳಿಗೆ ಒಂದನೇ ಅಧ್ಯಾಯದ ಕಂಡಿಕೆ 1.6ನ್ನು ನೋಡಬಹುದು. | | | | | | |

2014–15ಕ್ಕೆ ಹೋಲಿಸಿದರೆ ಸಾರ್ವಜನಿಕ ಋಣ ಮತ್ತು ಇತರ ಜವಾಬ್ದಾರಿಗಳಲ್ಲಿ ₹17,070ಕೋಟಿಗಳ (ಶೇಕಡ 10.77) ನಿವ್ವಳ ಹೆಚ್ಚಳವಿದೆ.

2015–16ರ ಒಟ್ಟು ಸಾಲ ಮತ್ತು ಇತರೆ ಜವಾಬ್ದಾರಿಗಳ ಮೇಲಣ ಬಡ್ಡಿ ₹11,343 ಕೋಟಿಯಲ್ಲಿ, ಆಯವ್ಯಯದ ಹೊರಗಿನ ಸಾಲದ ಮೇಲಿನ ಬಡ್ಡಿಯನ್ನು (₹596.99 ಕೋಟಿ) ಒಳಗೊಂಡಂತೆ ಆಂತರಿಕ ರಾಜ್ಯ ಸರ್ಕಾರದ ಆಂತರಿಕ ಸಾಲದ ಮೇಲಣ ಬಡ್ಡಿ (₹8,222 ಕೋಟಿ), ಭವಿಷ್ಯ ನಿಧಿ ಮತ್ತು ಸಣ್ಣ ಉಳಿತಾಯಗಳ ಮೇಲಣ ಬಡ್ಡಿ (₹1,844 ಕೋಟಿ) ಕೇಂದ್ರದ ಸಾಲ ಮತ್ತು ಮುಂಗಡಗಳ ಮೇಲಣ ಬಡ್ಡಿ (₹680 ಕೋಟಿಗಳು) ಹಾಗೂ ಮೀಸಲು ನಿಧಿ ಮತ್ತು ಇತರೆ ಜವಾಬ್ದಾರಿಗಳ ಮೇಲಣ ಬಡ್ಡಿ (₹0.08 ಕೋಟಿ) ಯೂ ಒಳಗೊಂಡಿರುತ್ತದೆ. ಹಾಗೂ ಒಟ್ಟು ಬಡ್ಡಿ ಪಾವತಿಯು 2015–16ರ ರಾಜಸ್ವ ವೆಚ್ಚದ ಶೇಕಡಾ 9.69ರಷ್ಟಾಗುತ್ತದೆ ಮತ್ತು ರಾಜಸ್ವ ಸ್ವೀಕೃತಿಯ ಶೇಕಡಾ 9.55ರಷ್ಟಿದೆ. 2014–15ಕ್ಕಿಂತಲೂ 2015–16 ರಲ್ಲಿ ಬಡ್ಡಿ ಪಾವತಿ ಮೇಲಿನ ವೆಚ್ಚವು ₹1,539 ಕೋಟಿಗಳಷ್ಟು ಹೆಚ್ಚಾಗಿದೆ.

### *6.2.1 ರಾಜ್ಯ ಭವಿಷ್ಯ ನಿಧಿ*

ಕೆಳಗಿನ ಕೋಷ್ಟಕವು ರಾಜ್ಯ ಭವಿಷ್ಯ ನಿಧಿಯ ಕಳೆದ ಐದು ವರ್ಷಗಳ ಪ್ರವೃತ್ತಿಯನ್ನು ಸೂಚಿಸುತ್ತದೆ.

**(₹ ಕೋಟಿಗಳಲ್ಲಿ)**

| ವರ್ಷ | ಆರಂಭಿಕ ಶಿಲ್ಕು | ಸ್ವೀಕೃತಿಗಳು* | ಪಾವತಿಗಳು | ವರ್ಷದ ನಿವ್ವಳ ಸೇರ್ಪಡೆ | ಅಂತಿಮ ಶಿಲ್ಕು | ಭವಿಷ್ಯ ನಿಧಿ ಶಿಲ್ಕಿನ ಮೇಲಿನ ಬಡ್ಡಿ |
|---|---|---|---|---|---|---|
| 2011–12 | 6,981 | 1,917 | 1,059 | 858 | 7,839 | 580 |
| 2012–13 | 7,839 | 2,248 | 1,290 | 958 | 8,797 | 662 |
| 2013–14 | 8797 | 2,558 | 1,371 | 1,187 | 9,984 | 784 |
| 2014–15 | 9,984 | 2,847 | 1,744 | 1,103 | 11,087 | 866 |
| 2015–16 | 11,087 | 3,098 | 2,073 | 1,025 | 12,112 | 952 |

(*) ಕೋಷ್ಟಕದ ಕೊನೆಯ ಸಾಲಿನಲ್ಲಿ ನಮೂದಿಸಿದ ಬಡ್ಡಿಯನ್ನೂ ಒಳಗೊಂಡಿದೆ.


### *6.2.2 ಸರ್ಕಾರಿ ಜವಾಬ್ದಾರಿಗಳ ಪ್ರವೃತ್ತಿ*

ಕೆಳಗಿನ ಕೋಷ್ಟಕವು ಕಳೆದ ಐದು ವರ್ಷಗಳ ಸರ್ಕಾರಿ ಜವಾಬ್ದಾರಿಗಳ ಪ್ರವೃತ್ತಿಯನ್ನು ಸೂಚಿಸುತ್ತದೆ. ಸರ್ಕಾರಿ ಜವಾಬ್ದಾರಿಗಳ ಪ್ರವೃತಿಯನ್ನು ತೋರಿಸುವ ನಕ್ಷೆಯನ್ನೂ ನೀಡಲಾಗಿದೆ.

(₹ ಕೋಟಿಗಳಲ್ಲಿ)

| ವರ್ಷ | ಆಂತರಿಕ ಋಣ | ಕೇಂದ್ರ ಸರ್ಕಾರದಿಂದ ಪಡೆದ ಸಾಲಗಳು | ಸಣ್ಣ ಉಳಿತಾಯಗಳು ಮತ್ತು ಭವಿಷ್ಯ ನಿಧಿ | ಇತರೆ ಜವಾಬ್ದಾರಿಗಳು | ಒಟ್ಟು ಜವಾಬ್ದಾರಿಗಳು |
|---|---|---|---|---|---|
| 2011–12 | 54,333 | 10,982 | 14,182 | 23,533 | 103,030 |
| 2012–13 | 63,418 | 11,634 | 15,914 | 25,801 | 116,767 |
| 2013–14 | 76,428 | 12,094 | 18,021 | 28,775 | 135,318 |
| 2014–15 | 92,904 | 12,681 | 20,176 | 32,792 | 158,553 |
| 2015–16 | 109,545 | 13,002 | 22,262 | 30,814 | 175,623(#) |

\# ರಾಜ್ಯದ ಸಂಚಿತ ನಿಧಿಯ ಭಾಗವಲ್ಲದ, ಆದರೆ ಹಣಕಾಸಿನ ಕಾರ್ಯನಿರ್ವಹಣೆಯ ಮಾನದಂಡವಾಗಿ 'ಒಟ್ಟು ಜವಾಬ್ದಾರಿ'ಯ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿರುವ ಆಯವ್ಯಯದ ಹೊರಗಿನ ಸಾಲದ ಮೊತ್ತ ₹7,697 ಕೋಟಿಗಳನ್ನು ಹೊರತುಪಡಿಸಿದೆ. ವಿವರಗಳಿಗಾಗಿ ದಯಮಾಡಿ ಅಧ್ಯಾಯ I ರಲ್ಲಿನ ಕಂಡಿಕೆ 1.6 ನೋಡಿರಿ.



ಕರ್ನಾಟಕ ವಿತ್ತೀಯ ಜವಾಬ್ದಾರಿ ಅಧಿನಿಯಮ 2002ರ ಅನ್ವಯ ರಾಜ್ಯ ಸರ್ಕಾರವು 2011-16 ಅವಧಿಗೆ ರಾ.ಒ.ಆಂ.ಉ.ಕ್ಕೆ ಬಾಕಿಯಿರುವ ಸಾಲದ ಶೇಕಡಾವಾರು ಹೊಸ ಗರಿಷ್ಠ ಪರಿಮಿತಿಯನ್ನು ಪಡೆದಿದೆ. ಪರಿಚ್ಛೇದ 4, ಕನಾಟಕ ವಿತ್ತೀಯ ಜವಾಬ್ದಾರಿ ಆಧಿನಿಯಮ 2002ಕ್ಕೆ ತಿದ್ದುಪಡಿಯಾಗಿ, ಕ.ವಿ.ಜ.(ತಿದ್ದುಪಡಿ)ಅಧಿನಿಯಮ2011ನ್ನು 17/03/2011ರಲ್ಲಿ ಹೊಸ ಗರಿಷ್ಠಮಿತಿಯ ಸೇರ್ಪಡೆಗೆ ಅನುಗುಣವಾಗಿ ರಾಜ್ಯವು 2015-16ರ ಅಂತ್ಯಕ್ಕೆ ಬಾಕಿಯಿರುವ ಒಟ್ಟು ಸಾಲದ ಮೊತ್ತವು ರಾ.ಒ.ಅಂ.ಉ.ದ ಶೇಕಡಾ 24.91ರ ಹಣಕಾಸಿನ ಗುರಿ ನಿಗದಿಯಾಗಿತ್ತು.

ಕರ್ನಾಟಕ ಸರ್ಕಾರವು 'ಒಟ್ಟು ಜವಾಬ್ದಾರಿ'ಯ ವ್ಯಾಪ್ತಿಯನ್ನು ವಿಸ್ತರಿಸಲು ಎಲ್ಲಿ ಅಸಲು ಮತ್ತು/ಅಥವಾ ಬಡ್ಡಿಗಳನ್ನು ಕರ್ನಾಟಕ ಸರಕಾರದ ಆಯವ್ಯಯದಿಂದ ಹೊರತುಪಡಿಸಿ ತುಂಬಿಸಬೇಕಾಗುವುದೋ ಅಂತಹ ಸಾರ್ವಜನಿಕ ಉದ್ದಿಮೆಗಳ ಮತ್ತು ವಿಶೇಷ ಉದ್ದೇಶದ ವಾಹನಗಳ ಮತ್ತು ಇತರ ತತ್ಸಮಾನ ಉಪಕರಣಗಳನ್ನು ಸೇರಿಸಿ 'ಒಟ್ಟು ಜವಾಬ್ದಾರಿ'ಯನ್ನು ವಿಸ್ತರಿಸುವುದಕ್ಕಾಗಿ ಕರ್ನಾಟಕ ವಿತ್ತೀಯ ಜವಾಬ್ದಾರಿ ಅಧಿನಿಯಮ 2011ಕ್ಕೆ ಕರ್ನಾಟಕ ಹಣಕಾಸು ಜವಾಬ್ದಾರಿ (ತಿದ್ದುಪಡಿ) ಅಧಿನಿಯಮ 2014ನ್ನು 28ನೇ ಫೆಬ್ರವರಿ 2014ರಲ್ಲಿ ಜಾರಿಗೆ ತಂದಿದೆ.

ಹಣಕಾಸು ಇಲಾಖೆ ಒದಗಿಸಿದ ಆಯವ್ಯಯದ ಹೊರಗಿನ ಸಾಲಗಳ ವಿವರಗಳನ್ನು ಕೆಳಗೆ ನೀಡಲಾಗಿದೆ.

| ಆರಂಭದ ಶಿಲ್ಕು | ಪ್ರಸಕ್ತ ವರ್ಷದ ಸಾಲ | ಪ್ರಸಕ್ತ ಸಾಲಿನಲ್ಲಿ ಹಿಂತಿರುಗಿಸಿದ ಅಸಲು | ಪ್ರಸಕ್ತ ವರ್ಷದಲ್ಲಿ ಹಿಂತಿರುಗಿಸಿದ ಬಡ್ಡಿ | ಅಂತಿಮ ಶಿಲ್ಕು |
|---|---|---|---|---|
| (1) | (2) | (3) | (4) | (5) |
| 5,055.92 | 2,372.00 | 399.73 | 595.05 | 7,698.69 |
| ಸೂಚನೆ:ಅಂತಿಮ ಶಿಲ್ಕನ್ನು (ಕಾಲಂ 5) ಒಂದನೇ ಕಾಲಂ(1)ಕ್ಕೆ ಕಾಲಂ (2)ನ್ನು ಸೇರಿಸಿ ಕಲಂ (3)ನ್ನು ಕಳೆದು ತೋರಿಸಲಾಗಿದೆ | | | | |

ಆಯವ್ಯಯದ ಹೊರಗಿನ ಸಾಲವೂ ಸೇರಿ ಸರ್ಕಾರದ ಒಟ್ಟು ಸಾಲವು (₹7,699 ಕೋಟಿ) 2015-16ರಲ್ಲಿ ₹24,769 ಕೋಟಿಗಳಷ್ಟು ಹೆಚ್ಚಾಗಿದೆ. ಇದರಿಂದ 31ನೇ ಮಾರ್ಚ್ 2016ಕ್ಕೆ ಒಟ್ಟು ಜವಾಬ್ದಾರಿಯು ₹1,83,322 ಕೋಟಿಗಳಷ್ಟಿತ್ತು.

ಆಯವ್ಯಯದ ಹೊರಗಿನ ಬಾಕಿಯಿರುವ ಜವಾಬ್ದಾರಿ ಸಾಲಗಳಾದ ₹7,699 ಕೋಟಿಗಳನ್ನು ವಿತ್ತೀಯ ಸೂಚಿಯ ಉದ್ದೇಶಕ್ಕಾಗಿ ಗಣನೆಗೆ ತೆಗೆದುಕೊಂಡ ನಂತರ 2015-16ರ ಆರ್ಥಿಕ ವರ್ಷದ ಅಂತ್ಯಕ್ಕೆ ಒಟ್ಟು ಜವಾಬ್ದಾರಿಯು ಬಾಕಿ ಇದ್ದ ಋಣವು ರಾ.ಒ.ಆಂ.ಉ. ದ ಶೇಕಡ 24.91 ರಷ್ಟಿತ್ತು.

### *6.2.3 ಸಾದಿಲ್ವಾರು ನಿಧಿ*

**ರಾಜ್ಯದ ಸಾದಿಲ್ವಾರು ನಿಧಿಯು ರಾಜ್ಯದ ವಿಧಾನಮಂಡಲದ ಅಧಿಕಾರದ ಒಪ್ಪಿಗೆಯನ್ನು ಕಾದಿರಿಸಿ** ಸರ್ಕಾರವು ಭರಿಸಬೇಕಾದ ಅನಿರೀಕ್ಷಿತ ವೆಚ್ಚಗಳನ್ನು ಪೂರೈಸಲು ಸಾದಿಲ್ವಾರು ನಿಧಿಯ ಸ್ಥಾಪನೆಯಾಗಿದೆ. ಕಳೆದ ಐದು ವರ್ಷಗಳ ಅವಧಿಯಲ್ಲಿ ಈ ನಿಧಿಯ ಬಳಕೆಯ ವಿವರಣೆಗಳನ್ನು ಕೆಳಗೆ ನೀಡಲಾಗಿದೆ.

| ವಿವರಣೆಗಳು | 2011-12 | 2012-13 | 2013-14 | 2014-15 | 2015-16 |
|---|---|---|---|---|---|
| ಸಾದಿಲ್ವಾರು ನಿಧಿಯಿಂದ ಹಣ ಪಡೆದ ಸಂದರ್ಭಗಳ ಸಂಖ್ಯೆ | 15 | 9 | 9 | 2 | 5 |
| ಸಾದಿಲ್ವಾರು ನಿಧಿಯಿಂದ ಪಡೆದ ಒಟ್ಟು ಮೊತ್ತ ₹ಕೋಟಿಗಳಲ್ಲಿ | 46.61 | 46.00 | 56.89 | 16.95 | 36.25 |
| ಆಯವ್ಯಯದ ಅಂದಾಜಿಗೆ ಸಾದಿಲ್ವಾರು ನಿಧಿಯಿಂದ ಪಡೆದ ಹಣದ ಪ್ರತಿಶತ | 0.05 | 0.04 | 0.04 | 0.01 | 0.02 |

## 6.3 ಖಾತರಿಗಳು

ಕರ್ನಾಟಕ ಖಾತರಿಗಳ ಮಿತಿ ಅಧಿನಿಯಮ 1999 ರಲ್ಲಿ ನಿಗದಿಪಡಿಸಿದ ಮಿತಿಯಂತೆ ಯಾವುದೇ ವರ್ಷದ ಏಪ್ರಿಲ್ ಒಂದರಂದು ಬಾಕಿ ಇರುವ ಸರ್ಕಾರಿ ಖಾತರಿಗಳ ಮೊತ್ತವು ಮಹಾಲೇಖಪಾಲರ ಪುಸ್ತಕದಲ್ಲಿ ತೋರಿಸಿರುವ ಹಿಂದಿನ ಎರಡು ವರ್ಷಗಳ ರಾಜ್ಯದ ರಾಜಸ್ವ ಸ್ವೀಕೃತಿಯ ಶೇಕಡ 80ಕ್ಕೆ ಮೀರದಂತೆ ಇರಬೇಕು. ಹಣಕಾಸು ಲೆಕ್ಕದಲ್ಲಿ ತೋರಿಸಿರುವ ಸರ್ಕಾರದ ಬಾಕಿ ಇರುವ ಗರಿಷ್ಠ ಖಾತರಿಗಳ ಮೊತ್ತವು ಅಧಿನಿಯಮದಲ್ಲಿ ನಿಗಡಿಪಡಿಸಿದ ಮಿತಿಯ ಒಳಗಿದೆ. ಶಾಸನ ಬದ್ಧ ನಿಗಮಗಳು, ಸರ್ಕಾರಿ ಕಂಪನಿಗಳು, ಸ್ಥಳೀಯ ಸಂಸ್ಥೆಗಳು, ಸಹಕಾರಿ ಸೊಸೈಟಿಗಳು ಮುಂತಾದವುಗಳು ಪಡೆದ ಸಾಲದ ಮರುಪಾವತಿಗೆ ರಾಜ್ಯ ಸರ್ಕಾರ ನೀಡಿದ ಖಾತರಿಗಳ ವಿವರಗಳನ್ನು ಹಣಕಾಸು ಲೆಕ್ಕಗಳ **ಸಂಪುಟ–II**ರ ವಿವರಣಾ ಪಟ್ಟಿ 20ರಲ್ಲಿ ನೀಡಲಾಗಿದೆ. ಕಳೆದ ಐದು ವರ್ಷಗಳಲ್ಲಿ ಪ್ರತಿವರ್ಷ ಖಾತರಿ ನೀಡಿದ ಗರಿಷ್ಠ ಮೊತ್ತ ಮತ್ತು ಬಾಕಿ ಇರುವ ಅಸಲು ಮತ್ತು ಬಡ್ಡಿಯ ಮೊತ್ತವನ್ನು ಕೆಳಗೆ ನೀಡಲಾಗಿದೆ.

**(₹ ಕೋಟಿಗಳಲ್ಲಿ)**

| ವರ್ಷಾಂತ್ಯದಲ್ಲಿ | ಖಾತರಿ ನೀಡಿದ ಗರಿಷ್ಠ ಮೊತ್ತ (ಅಸಲು ಮಾತ್ರ) | 31ನೇ ಮಾರ್ಚಿಗೆ ಬಾಕಿ ಇರುವ ಮೊತ್ತ | |
|---|---|---|---|
| | | ಅಸಲು | ಬಡ್ಡಿ |
| 2011–12 | 13,262 | 6,491 | 149 |
| 2012–13 | 14,306 | 6,565 | 123 |
| 2013–14 | 16,145 | 7,671 | 112 |
| 2014–15 | 16,869 | 10,890 | 143 |
| 2015–16 | 18,358 | 13,155 | 170 |

## 6.4 ಬಾಹ್ಯ ಬೆಂಬಲಿತ ಯೋಜನೆಗಳು

ಬಾಹ್ಯ ಬೆಂಬಲಿತ ಯೋಜನೆಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಮರುಪಾವತಿಯ ಜವಾಬ್ದಾರಿಗಳ ವಿವರಗಳನ್ನು ಕೆಳಗೆ ನೀಡಲಾಗಿದೆ. ಪ್ರತಿ ಯೋಜನೆಯ ವಿವರಗಳನ್ನು ಹಣಕಾಸು ಲೆಕ್ಕಗಳು–**ಸಂಪುಟ–II**ರಲ್ಲಿ ಅನುಬಂಧ–Vರಲ್ಲಿ ನೀಡಲಾಗಿದೆ.

**(₹ ಕೋಟಿಗಳಲ್ಲಿ)**

| ಅವಧಿ | ಆರಂಭ ಶಿಲ್ಕು | ಸ್ವೀಕರಿಸಿದ ಮೊತ್ತ | ಮರು ಪಾವತಿಸಿದ ಮೊತ್ತ | ಮುಕ್ತಾಯ ಶಿಲ್ಕು |
|---|---|---|---|---|
| 2012–13 | 7,663 | 1,349 | 399 | 8,613 |
| 2013–14 | 8,613 | 1,159 | 410 | 9,362 |
| 2014–15 | 9,612 | 1,362 | 493 | 10,234 |
| 2015–16 | 10,234 | 1,271 | 664 | 10,840 |

~~~~~~
~~~~~~

# ಅಧ್ಯಾಯ VII

## ಇತರೆ ವಿಷಯಗಳು

### 7.1 ಸಾರ್ವಜನಿಕ ಋಣದಡಿ ವ್ಯತಿರಿಕ್ತ ಶಿಲ್ಕುಗಳು

ಸಂವಿಧಾನದ ಅನುಚ್ಛೇದ 293(1) ರಾಜ್ಯ ಸರ್ಕಾರದ ಸಾಲ ಪಡೆಯುವಿಕೆಯನ್ನು ನಿಯಂತ್ರಿಸುತ್ತದೆ. ರಾಜ್ಯ ಸರ್ಕಾರದ ಆಂತರಿಕ ಋಣದ ಶಿಲ್ಕು ₹109,545 ಕೋಟಿಗಳಷ್ಟಿದ್ದು, ಇದರಲ್ಲಿ ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮಕ್ಕೆ ಸಂಬಂಧಿಸಿದ. ₹117.62 ಕೋಟಿಗಳ ಸಾಲದ ವ್ಯತಿರಿಕ್ತ ಶಿಲ್ಕು ಸೇರಿದೆ. ಕೇಂದ್ರ ಸರ್ಕಾರದ ಸಾಲ ಮತ್ತು ಮುಂಗಡಗಳ ಶಿಲ್ಕು ₹13,002 ಕೋಟಿಗಳಷ್ಟಿದ್ದು ಇದರಲ್ಲಿ ಕೇಂದ್ರ ಸರ್ಕಾರದ 31-03-2010 ಬಾಕಿಯಿರುವ ಸಾಲಗಳು 13ನೆಯ ವಿತ್ತ ಆಯೋಗದ ಶಿಫ಼ಾರಸಿನಂತೆ ಮನ್ನಾ ಮಾಡಿದ ₹23.66 ಕೋಟಿಗಳು ಸೇರಿದೆ. ವ್ಯತಿರಿಕ್ತ ಶಿಲ್ಕುಗಳ ಹೊಂದಾಣಿಕೆಯು ಪರಿಶೀಲನೆಯಲ್ಲಿದೆ.

### 7.2 ರಾಜ್ಯ ಸರ್ಕಾರ ನೀಡಿದ ಸಾಲ ಮತ್ತು ಮುಂಗಡಗಳು

2015-16 ರ ಅಂತ್ಯಕ್ಕೆ ರಾಜ್ಯ ಸರ್ಕಾರ ನೀಡಿದ ಒಟ್ಟು ಸಾಲ ಮತ್ತು ಮುಂಗಡಗಳ ಮೊತ್ತವು ₹13,813 ಕೋಟಿಗಳಷ್ಟಿತ್ತು. ಈ ಸಾಲ ಮತ್ತು ಮುಂಗಡಗಳನ್ನು ವಿವಿಧ ಸಾಲವರ್ಗಗಳಾದ ಪಂಚಾಯತ್ ರಾಜ್ ಸಂಸ್ಥೆಗಳು, ನಗರಾಭಿವೃದ್ಧಿ ಪ್ರಾಧಿಕಾರಗಳು ಮತ್ತು ಪುರಸಭೆಗಳು, ಗೃಹ ಮಂಡಳಿಗಳು ಮತ್ತು ನಿಗಮಗಳು, ಸರ್ಕಾರಿ ಕಂಪನಿಗಳು ಮತ್ತು ನಿಗಮಗಳು, ಸಹಕಾರಿ ಸಂಸ್ಥೆಗಳು ಮತ್ತು ಇತರ ಸಂಸ್ಥೆಗಳಿಗೆ ನೀಡಲಾಗುತ್ತದೆ. 31ನೇ ಮಾರ್ಚ್ 2016ರ ಅಂತ್ಯಕ್ಕೆ ಮರುಪಾವತಿಯ ₹3,763 ಕೋಟಿಗಳ ಅಸಲು ಮತ್ತು ₹2,507 ಕೋಟಿಗಳ ಬಡ್ಡಿಯ ಮೊತ್ತವು ಬಾಕಿ ಉಳಿದಿದ್ದು, ಇದಕ್ಕೆ ಸಂಬಂಧಿಸಿದ ಸಾಲ ಲೆಕ್ಕಗಳನ್ನು ಮಹಾಲೇಖಪಾಲರು (ಲೆಕ್ಕ ಮತ್ತು ಹಕ್ಕುದಾರಿ) ಕರ್ನಾಟಕ, ನಿರ್ವಹಿಸಿದ್ದಾರೆ.

### 7.3 ಸ್ಥಳೀಯ ಸಂಸ್ಥೆಗಳು ಮತ್ತು ಇತರರಿಗೆ ನೀಡಿದ ಆರ್ಥಿಕ ಬೆಂಬಲ

ಸ್ಥಳೀಯ ಸಂಸ್ಥೆಗಳು ಮುಂತಾದವುಗಳಿಗೆ ನೀಡಿದ ಸಹಾಯಾನುದಾನಗಳ ಮೊತ್ತವು 2014-15 ರಲ್ಲಿದ್ದ ₹38,747 ಕೋಟಿಗಳಿಂದ 2015-16 ರಲ್ಲಿ ₹40,022 ಕೋಟಿಗಳಿಗೆ ಏರಿದೆ. ಜಿಲ್ಲಾ ಪಂಚಾಯತಿಗಳು, ತಾಲ್ಲೂಕು ಪಂಚಾಯತಿಗಳು, ಗ್ರಾಮ ಪಂಚಾಯತಿಗಳು ಮತ್ತು ಪುರಸಭೆಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ನೀಡಿದ ಅನುದಾನವು (₹32,768 ಕೋಟಿಗಳು) ಪ್ರಸಕ್ತ ಸಾಲಿನಲ್ಲಿ ನೀಡಿದ ಒಟ್ಟು ಅನುದಾನದ ಶೇಕಡ 82ರಷ್ಟಿದೆ. ಕಳೆದ ಮೂರು ವರ್ಷಗಳಲ್ಲಿ ನೀಡಿದ ಸಹಾಯಾನುದಾನದ ವಿವರಗಳು ಕೆಳಕಂಡಂತಿದೆ.

(₹ ಕೋಟಿಗಳಲ್ಲಿ)

| ವರ್ಷ | ಜಿಲ್ಲಾ ಪಂಚಾಯತ್‌ಗಳು | ತಾಲ್ಲೂಕು ಪಂಚಾಯತ್‌ಗಳು | ಗ್ರಾಮ ಪಂಚಾಯತ್‌ಗಳು | ನಗರಸ್ಥಳೀಯ ಸಂಸ್ಥೆಗಳು ಮತ್ತು ಪುರಸಭೆಗಳು | ಇತರೆ | ಒಟ್ಟು |
|---|---|---|---|---|---|---|
| | | | | | | |
| 2011-12 | 5,653 | 8,211 | 1,344 | 4,248 | 4,478 | 23,934 |
| 2012-13 | 6,497 | 10,423 | 1,611 | 4,009 | 4,636 | 27,176 |
| 2013-14 | 7,488 | 11,403 | 1,619 | 5,019 | 7,082 | 32,611 |
| 2014-15 | 9,601 | 12,709 | 2,678 | 6,010 | 7,749 | 38,747 |
| 2015-16 | 9,476 | 13,596 | 3,620 | 6,076 | 7,254 | 40,022 |

*ಇತರೆಯಲ್ಲಿ ಸಾರ್ವಜನಿಕ ಉದ್ದಿಮಗಳು, ಸ್ವಾಯತ್ತ ಸಂಸ್ಥೆಗಳು, ಸಹಕಾರಿ ಸಂಸ್ಥೆಗಳು ಮತ್ತು ಸರ್ಕಾರೇತರ ಸಂಘ ಸಂಸ್ಥೆಗಳು ಸೇರಿವೆ.

### *7.3.1 ಬಳಕೆ ಪ್ರಮಾಣ ಪತ್ರಗಳ ಸಲ್ಲಿಕೆ*

ಸರ್ಕಾರವು ವಿವಿಧ ಫಲಾನುಭವಿಗಳಿಗೆ ಸಹಾಯಾನುದಾನಗಳನ್ನು ಮಂಜೂರು ಮಾಡುವ ಸಂದರ್ಭದಲ್ಲಿ ಸಹಾಯಾನುದಾನದ ಬಳಕೆ ಪ್ರಮಾಣ ಪತ್ರವನ್ನು ಮಹಾಲೇಖಪಾಲರಿಗೆ ಸಲ್ಲಿಸಲು ಸೂಚಿಸಬಹುದು. ಮಹಾಲೇಖಪಾಲರು (ಲೆಕ್ಕ ಮತ್ತು ಹಕ್ಕುದಾರಿ) ಅಂತಹ ಹಣಬಿಡುಗಡೆಗಳಲ್ಲಿ ಮಾತ್ರ ಬಳಕೆ ಪ್ರಮಾಣ ಪತ್ರಗಳ ಸಲ್ಲಿಕೆಯನ್ನು ಗಮನಿಸುತ್ತಾರೆ. 31 ಮಾರ್ಚ್ 2016ರ ಅಂತ್ಯಕ್ಕೆ ₹488 ಕೋಟಿಗಳ ಮೊತ್ತದ ಸುಮಾರು 124 ಸಹಾಯಾನುದಾನ ಬಿಲ್ಲುಗಳಲ್ಲಿ ಬಳಕೆ ಪ್ರಮಾಣ ಪತ್ರಗಳ ಸಲ್ಲಿಕೆಯು ಬಾಕಿ ಉಳಿದಿದೆ.

## 7.4 ನಗದು ಶಿಲ್ಕು ಮತ್ತು ನಗದು ಶಿಲ್ಕಿನ ಹೂಡಿಕೆಗಳು

(₹ ಕೋಟಿಗಳಲ್ಲಿ)

| ಭಾಗ | 1-4-2015 ರಲ್ಲಿದ್ದಂತೆ | 31-3-2016 ರಲ್ಲಿದ್ದಂತೆ | ನಿವ್ವಳ ಹೆಚ್ಚಳ(+)/ ಇಳಿಕೆ (-) |
|---|---|---|---|
| **ನಗದು ಶಿಲ್ಕು** * | **5** | **(-) 75** | **(-) 80** |
| **ನಗದು ಶಿಲ್ಕಿನಿಂದ ಹೂಡಿಕೆಗಳು** (ಭಾರತ ಸರ್ಕಾರದ ಭದ್ರತೆಗಳು ಮತ್ತು ಟ್ರೆಜರಿ ಬಿಲ್ಲುಗಳಲ್ಲಿ) | **17,962** | **16,917** | **(+) 1,045** |
| **ಇತರೆ ನಗದು ಶಿಲ್ಕು ಮತ್ತು ಹೂಡಿಕೆಗಳು** | **5,934** | **10,276** | **(+) 4,342** |
| (a) ಇಲಾಖಾ ಅಧಿಕಾರಿಗಳ ಬಳಿಯ ನಗದು ಮತ್ತು ಖಾಯಂ ಮುಂಗಡ | 4 | 4 | ... |
| (b) ಮೀಸಲು ನಿಧಿಗಳ ಹೂಡಿಕೆಗಳು | 5,930 | 10,272 | (+) 4,342 |
| **ಒಟ್ಟು** | **23,901** | **27,118** | **(+) 3,217** |
| **ಬಡ್ಡಿ ವಸೂಲಿ** | **747** | **1,028** | **(+) 281** |
| (*) ನಗದು ಶಿಲ್ಕು ಸ್ಥಳೀಯ ಇರಸಾಲು ಮತ್ತು ರಿಸರ್ವ್ ಬ್ಯಾಂಕಿನ ಠೇವಣಿಗಳನ್ನು ಒಳಗೊಂಡಿದೆ. | | | |

2015-16ರಲ್ಲಿ ಹಿಂದಿನ ವರ್ಷಕ್ಕೆ ಹೋಲಿಸಿದರೆ ನಗದು ಶಿಲ್ಕಿನ ಹೂಡಿಕೆಗಳ ಮೇಲಿನ ಬಡ್ಡಿಯಲ್ಲಿ ಶೇಕಡ 37.62 ರಷ್ಟು ಇಳಿಕೆಯಾಗಿದೆ.

## 7.5 ಲೆಕ್ಕಗಳ ಹೊಂದಾಣಿಕೆ

ಲೆಕ್ಕಗಳ ನಿಖರತೆ ಮತ್ತು ವಿಶ್ವಸನೀಯತೆಗಳು ಇತರೆ ಅಂಶಗಳೊಂದಿಗೆ ಇಲಾಖೆಗಳಲ್ಲಿ ಲಭ್ಯವಿರುವ ಅಂಕಿಗಳನ್ನು ಮಹಾಲೇಖಪಾಲರು (ಲೆಕ್ಕ ಮತ್ತು ಹಕ್ಕುದಾರಿ) ಸಂಕಲಿಸಿದ ಲೆಕ್ಕಗಳ ಅಂಕಿಗಳೊಂದಿಗೆ ಸಕಾಲದಲ್ಲಿ ಹೊಂದಾಣಿಕೆ ಮಾಡುವುದನ್ನು ಅವಲಂಬಿಸಿವೆ. ಈ ಕೆಲಸವು ಆಯಾ ಇಲಾಖಾ ಮುಖ್ಯಸ್ಥರುಗಳಿಂದ ನಿರ್ವಹಿಸಲ್ಪಡಬೇಕಾಗಿದೆ. 2015-16ರಲ್ಲಿ ರಾಜ್ಯದ ₹137,742 ಕೋಟಿಗಳ ಒಟ್ಟು ವೆಚ್ಚದಲ್ಲಿ ಶೇಕಡ 83ರಷ್ಟು (₹114,524 ಕೋಟಿಗಳು) ಹೊಂದಾಣಿಕೆಯಾಗಿತ್ತು. ಅದೇ ರೀತಿ ₹119,170 ಕೋಟಿಗಳ ಒಟ್ಟು ಸ್ವೀಕೃತಿಯಲ್ಲಿ ಶೇಕಡ 98 ರಷ್ಟು (₹116,826 ಕೋಟಿಗಳು) ಹೊಂದಾಣಿಕೆಯಾಗಿತ್ತು. ಸಾಲ ಮತ್ತು ಮುಂಗಡಗಳ ವಿತರಣೆ ಹಾಗೂ ಮರುಪಾವತಿ ಲೆಕ್ಕ ಹೊಂದಾಣಿಕೆಯನ್ನು ಯಾವುದೇ ಇಲಾಖೆಗಳ ಮುಖ್ಯ ನಿಯಂತ್ರಣಾಧಿಕಾರಿಗಳು ಮಾಡಿರುವುದಿಲ್ಲ.

### 7.6 ಖಜಾನೆಗಳಿಂದ ಲೆಕ್ಕಗಳ ಸಲ್ಲಿಕೆ

ರಾಜ್ಯದಲ್ಲಿ 33 ಜಿಲ್ಲಾ ಖಜಾನೆಗಳಿವೆ. 2015–16ನೇ ಸಾಲಿನಲ್ಲಿ 153 ಖಜಾನೆ ಲೆಕ್ಕಗಳನ್ನು ಸ್ವೀಕರಿಸಲಾಗಿತ್ತು. ಖಜಾನೆಗಳ ಲೆಕ್ಕಗಳ ಸಲ್ಲಿಕೆಯಲ್ಲಿ 151 ಸಂದರ್ಭಗಳಲ್ಲಿ 15 ದಿನಗಳವರೆಗಿನ ಹಾಗೂ ಒಂದು ಸಂದರ್ಭದಲ್ಲಿ 15 ದಿನಗಳ ಮೇಲ್ಪಟ್ಟು ಒಂದು ತಿಂಗಳ ಒಳಗಿನ ವಿಳಂಬವನ್ನು ಎರಡು ಸಂದರ್ಭಗಳಲ್ಲಿ ಗಮನಿಸಲಾಗಿತ್ತು.

### 7.7 ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳು ಮತ್ತು ಪಾವತಿಗಲ್ಲದ ಸವಿವರ ಸಾದಿಲ್ವಾರು ಬಿಲ್ಲುಗಳು

'ಸಾದಿಲ್ವಾರು' ವೆಚ್ಚ ಅಥವಾ 'ಸಾದಿಲ್ವಾರುಗಳು' ಒಂದು ಕಛೇರಿಯ ನಿರ್ವಹಣೆಗೆ ಅಗತ್ಯವಾದ ಎಲ್ಲಾ ಪ್ರಾಸಂಗಿಕ ವೆಚ್ಚ ಮತ್ತು ಇತರ ವೆಚ್ಚಗಳು ಅಥವಾ ಇಲಾಖೆಯ ನಿಗದಿತ ವರ್ಗೀಕರಣ ನಿಯಮಗಳ ಹೊರಗಿನ ವೆಚ್ಚ ಶೀರ್ಷಿಕೆಯಡಿ ಬರುವ ತಾಂತ್ರಿಕ ನಿರ್ವಹಣೆಯು ಇಲಾಖಾ ವೆಚ್ಚಗಳನ್ನು ಒಳಗೊಂಡಿದೆ. ಸಾದಿಲ್ವಾರು ವೆಚ್ಚ ಕೈಪಿಡಿ 1958ರ ಕಂಡಿಕೆ 36ರ ಅನ್ವಯ ಹಣ ಸೆಳೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿಗಳು ಸಮರ್ಥನಾ ದಾಖಲೆಗಳು ಇಲ್ಲದೆಯೇ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಮೂಲಕ ಹಣ ಸೆಳೆಯುವ ಅಧಿಕಾರವನ್ನು ಹೊಂದಿದ್ದಾರೆ. ಅಂತಹ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳನ್ನು ಗರಿಷ್ಠ 90 ದಿನಗಳ ಒಳಗೆ ಸವಿವರ ಸಾದಿಲ್ವಾರು ಬಿಲ್ಲುಗಳನ್ನು ಸಲ್ಲಿಸುವ ಮೂಲಕ ಇತ್ಯರ್ಥ ಮಾಡಬೇಕಾಗಿದೆ. 31 ಮಾರ್ಚ್ 2016ರ ಅಂತ್ಯಕ್ಕೆ ₹221 ಕೋಟಿಗಳನ್ನು ಒಳಗೊಂಡ ಸುಮಾರು 7,493 ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳು, ಸವಿವರ ಸಾದಿಲ್ವಾರು ಬಿಲ್ಲುಗಳ ಸಲ್ಲಿಕೆಯಾಗದೆ ಬಾಕಿ ಉಳಿದಿವೆ.

### 7.8 ಅಪೂರ್ಣ ಕಾಮಗಾರಿಗಳ ಮೇಲಿನ ಬದ್ಧತೆಗಳು

ಲೋಕೋಪಯೋಗಿ ಕಾಮಗಾರಿಗಳ ಇಲಾಖೆ, ಜಲಸಂಪನ್ಮೂಲ ಇಲಾಖೆ ಮತ್ತು ಜನಾರೋಗ್ಯ ಮತ್ತು ಇಂಜಿನೀಯರಿಂಗ್ ಇಲಾಖೆಗಳು ಕೈಗೊಂಡ ವಿವಿಧ ನಿರ್ಮಾಣ ಕಾಮಗಾರಿಗಳ ಮೇಲೆ ರಾಜ್ಯ ಸರ್ಕಾರವು 2015–16ರವರೆಗೆ ಒಟ್ಟು ₹13,459 ಕೋಟಿಗಳ ವೆಚ್ಚವನ್ನು ಮಾಡಿದೆ. ಆದರೆ ಈ ನಿರ್ಮಾಣ ಯೋಜನೆಗಳಲ್ಲಿ ತೊಡಗಿರುವ ಇಲಾಖೆಗಳು, 2015–16ರ ಅಂತ್ಯಕ್ಕೆ ₹1,548 ಕೋಟಿಗಳ ಅಂದಾಜಿನ 665 ಕಾಮಗಾರಿಗಳು ಅಪೂರ್ಣವಾಗಿ ಉಳಿದಿದ್ದು ಇವುಗಳ ಮೇಲೆ ₹3,029 ಕೋಟಿಗಳ ಸರ್ಕಾರದ ಬದ್ಧತೆಗಳನ್ನು ವರದಿ ಮಾಡಿವೆ. ವಿವರ ಕೆಳಗಿನಂತಿವೆ.

**(₹ಕೋಟಿಗಳಲ್ಲಿ)**

| ಅವಧಿ | ಕಾಮಗಾರಿಗಳ ಸಂಖ್ಯೆ | ಕಾಮಗಾರಿಗಳ ಅಂದಾಜು | ತಹಲ್ ವರೆಗಿನ ವೆಚ್ಚ |
|---|---|---|---|
| 2005–2010 | 4 | 25 | 24 |
| 2010–2015 | 305 | 1,599 | 865 |
| 2010–2015 | 356 | 1,172 | 359 |
| **ಮೊತ್ತ** | **665** | **2,796** | **1,248** |

~~~~~
~~~~~